# 7ನೇ ತರಗತಿ ವಿಜ್ಞಾನ

1. ಪ್ರತಿಯೊಂದು ಜೀವಕೋಶ ೩ ಪ್ರಮುಖ ಭಾಗಗಳಿಂದ ಕೂಡಿದೆ. 1. ಕೋಶಪೊರೆ, 2. ಕೋಶ ದ್ರವ್ಯ ೩. ಕೋಶ ಕೇಂದ್ರ
2. ಕೋಶಪೊರೆ, ಕೋಶ ಕೇಂದ್ರದ ಮಧ್ಯೆ ಕೋಶ ದ್ರವ್ಯವಿರುತ್ತದೆ.
3. ಕೋಶ ದ್ರವ್ಯದಲ್ಲಿ ಅನೇಕ ರೀತಿಯ ಕಣದಂಗಗಳು ಕಂಡುಬರುತ್ತವೆ.
4. ಗಾಲ್ಗಿ ಸಂಕೀರ್ಣ ಜೀವಕೋಶಗಳಿಗೆ ಬೇಕಾದ "ಕಿಣ್ವಗಳನ್ನು" ಉತ್ಪಾದಿಸ್ಮತ್ತದೆ.
5. "ಕೋಶರಸಾಂತರ ಜಾಲ" ಪ್ರೋಟೀನ್" ಉತ್ಪಾದನೆ ಮತ್ತು ಸಂಗ್ರಹ ಕಾರ್ಯದಲ್ಲಿ ಸಹಾಯವಾಗುತ್ತವೆ.
6. "ಕೋಶಬೀಜ" ಜೀವಕೋಶದ ಮಧ್ಯಭಾಗದಲ್ಲಿದ್ದು, ಜೀವಕೋಶದ ಎಲ್ಲಾ ಚಟುವಟಿಕೆಗಳನ್ನು ನಿಯಂತ್ರಿಸುತ್ತದೆ.
7. ಜೀವಕೋಶದ ಒಂದು ಭಾಗವಾದ ಅತ್ಯಂತ ಪ್ರಮುಖ ಭಾಗವಾಗಿದ್ದು, ಇದರಲ್ಲಿ DNA & RNA ಗಳಿದ್ದು, ಇದು ದಾರದಂತಹ ರಚನೆಗಳಿಂದ ಕೂಡಿರುತ್ತದೆ.
8. "ಸೆಂಟ್ರಿಯೋಲ್" ಕೋಶವಿಭಜನೆಯ ಸಂದರ್ಭದಲ್ಲಿ ಕಪಿರಿನ ಎಳೆಗಳನ್ನು ಉತ್ಪತ್ತಿ ಮಾಡುತ್ತದೆ.
9. ಲೈಸೋಜೋಮ್" ಜೀವಕೋಶದ "ಆತ್ಮಹತ್ಯಾ ಸಂಚಿ" ಎಂದು ಕರೆಯುವರು.
10. ಜೀವಕೋಶವನ್ನು ಕಂಡುಹಿಡಿದ ವಿಜ್ಞಾನಿ "ರಾಬರ್ಟ್ ಹುಕ್"
11. ಸೂಕ್ಷ್ಮದರ್ಶಕವನ್ನು ಕಂಡುಹಿಡಿದ ವಿಜ್ಞಾನಿ "ಲೆವೆನ್ ಹುಕ್"
12. ಆಸ್ಟ್ರಿಚ್ ಪಕ್ಷಿಯ ಪ್ರೆಟ್ಟೆ "ಏಕಕೋಶದ್ದಾಗಿದೆ"
13. ಅಮಿಬಾ, ಯೂಗ್ಲೀನಾ, ಪ್ಯಾರಮೀಸಿಯಂ ಇವುಗಳು ಏಕಕೋಶ ಜೀವಿಗಳಾಗಿವೆ.
14. ದೇಹದ ವಿವಿಧ ಚಟುವಟಿಕೆಗಳನ್ನು ನಿಯಂತ್ರಿಸಲು "ಅಂಗಾಂಶ" ಸಹಾಯ ಮಾಡುತ್ತವೆ.
15. ರಕ್ತ, ಮೂಳೆ, ಅಸ್ತಿಮಜ್ಜು ಇವುಗಳು ಸಂಯೋಜಕ ಅಂಗಾಂಶವಾಗಿದೆ.
16. ಚರ್ಮ ಮತ್ತು ನರ ಅನುಲೇಪಕ ಅಂಗಾಂಶವಾಗಿದೆ.
17. ಸ್ನಾಯು-ಅಂಗಾಂಶ ಸ್ಥಿತಿಸ್ಥಾಪಕ ಶಕ್ತಿಯನ್ನು ಹೊಂದಿದ್ದು, "ಚಲನೆಗೆ ಸಹಾಯ" ಮಾಡುತ್ತದೆ.
18. ಸಸ್ಯ ಅಂಗಾಂಶವನ್ನು ರಕ್ಷಕ ಅಂಗಾಂಶ, ವಾಹಕ ಅಂಗಾಂಶ, ಆಧಾರ ಅಂಗಾಂಶ, ಮತ್ತು ವರ್ಧನ ಅಂಗಾಂಶ, ಎಂದು ವಿಭಾಗಿಸಬಹುದು.
19. ಸೈಲಂ: ನೀರ್ಗೊಳವೆ :: ಪ್ಲೋಯಂ: ಆಹಾರ ಕೊಳವೆ
20. ತೆಂಗಿನ ನಾರು : ಆಧಾರ ಅಂಗಾಂಶಕ್ಕೆ ಉದಾಹರಣೆ

21. "ವರ್ಧನ ಅಂಗಾಂಶ" ಎಲ್ಲಾ ಸಸ್ಯ ಅಂಗಾಂಶಗಳ ಉತ್ಪಾದನಾ ಕೇಂದ್ರವಾಗಿದೆ. ಇದು ಯಾವಾಗಲೂ ಬೆಳೆಯುತ್ತಿರುತ್ತವೆ.

22. ಯಾವುದು ಸ್ಥಳವನ್ನು ಅಕ್ರಮಿಸುತ್ತದೆಯೋ ಮತ್ತು ದ್ರವ್ಯರಾಶಿಯನ್ನು ಹೊಂದಿವೆಯೋ ಅದೇ ದ್ರವ್ಯ.

23. ದ್ರವ್ಯವು ಅಧಿಕ ಉಷ್ಣತೆಯಲ್ಲಿ ಪ್ಲಾಸ್ಮಾ ಸ್ಥಿತಿಯಾಗಿರುತ್ತದೆ.

24. " ಆಕ್ಸಿ ಅಸಿಟಲೀನ್ " ಜ್ವಾಲೆ ಪ್ಲಾಸ್ಮಾ ಸ್ಥಿತಿಗೆ ಉದಾಹರಣೆಯಾಗಿದ್ದು, ಇದನ್ನು ಲೋಹದ ಬೆಸುಗೆಯಲ್ಲಿ ಬಳಸುತ್ತಾರೆ.

25. " ಹೀಲಿಯಂ " ಅನಿಲ ರೂಪದ ಮೂಲವಸ್ತುವಾಗಿದೆ. (ತಟಸ್ಥವಾಗಿರುವ ವಸ್ತುವಾಗಿದೆ)

26. ರಂಜಕ, ಸೋಡಿಯಂ, ಇಂಗಾಲ ಇವು ಘನರೂಪದ ಮೂಲ ವಸ್ತುವಾಗಿದೆ.

27. '109' ಮೂಲ ವಸ್ತುಗಳಿದ್ದು, ಪ್ರಾಕೃತಿಕವಾಗಿ 92 ಮಾತ್ರ ಸಿಗುತ್ತವೆ. ಉಳಿದವುಗಳನ್ನು ಪ್ರಯೋಗಾಲಯದಲ್ಲಿ ತಯಾರಿಸುತ್ತಾರೆ.

28. ಸೋಡಿಯಂ ಲೋಹವಾಗಿದೆ.

29. ವಸ್ತುಗಳು ಯಾವುದರಿಂದ ರಚನೆಯಾಗಿವೆ ಎಂದು ತಿಳಿಯಲು ನಡೆಸಿದ ಸಂಶೋಧನೆಯನ್ನು "ಆಲ್‌ಕೆಮಿ" ಅಥವಾ "ಕಸವಾದ" ಎಂದು ಕರೆಯುತ್ತಾರೆ.

30. ಬೇರೆ ಬೇರೆ ಮೂಲವಸ್ತುಗಳಲ್ಲಿರುವ ಪರಮಾಣುಗಳು ಬಿನ್ನವಾಗಿರುತ್ತವೆ.

31. **Ag-** ಬೆಳ್ಳಿ , **Au-**ಚಿನ್ನ **Hg-** ಪಾದರಸ **Sn-**ತವರ **Pb-**ಸೀಸ **NA-**ಸೋಡಿಯಂ **K-**ಪೊಟ್ಯಾಸಿಯಂ

32. ಪರಮಾಣುಗಳ ವೈವಿಧ್ಯತೆಯೇ ಮೂಲವಸ್ತುಗಳ ಸೃಷ್ಠಿಗೆ ಕಾರಣವಾಗಿದೆ.

33. ಮೂಲವಸ್ತು ಅಥವಾ ಸಂಯುಕ್ತ ವಸ್ತುವಿನ ಅತ್ಯಂತ ಸ್ವತಂತ್ರ ಕಣವನ್ನು ಅಣು ಎಂದು ಕರೆಯುವರು.

34. ಅಣುವಿನಲ್ಲಿರುವ ಪರಮಾಣು ಸಂಖ್ಯೆಯನ್ನು ಸಂಕೇತದ ಮೂಲಕ ತಿಳಿಯುವುದಕ್ಕೆ "ಅಣುಸೂತ್ರ" ಎನ್ನುವರು.

35. ಪ್ರತಿಫಲನದಲ್ಲಿ ಪತನಕೋನ ಪ್ರತಿಫಲನ ಕೋನಕ್ಕೆ ಸಮವಾಗಿರುವುದು.

36. ಸಮತಲ ದರ್ಪಣದಲ್ಲಿ ಪ್ರತಿಬಿಂಬ ಮಿಥ್ಯಾ ಪ್ರತಿಬಿಂಬವಾಗಿರುತ್ತದೆ. ವಸ್ತುವಿನ ಗಾತ್ರದಷ್ಟೆ ಇರುತ್ತದೆ "ಪಾರ್ಶ್ವ ವಿಪರ್ಯಾಯಕ್ಕೆ " ಒಳಗಾಗುತ್ತದೆ.

37. ಪ್ರತಿಬಿಂಬ ಕನ್ನಡಿಯ ಹಿಂದಕ್ಕೆ ಉಂಟಾದಂತೆ ಬಾಸವಾದರೆ ಅದನ್ನು ಮಿಥ್ಯಾಪ್ರತಿಬಿಂಬ ಎನ್ನುವರು

38. ನೋಟದ ನೇರಕ್ಕಿಲ್ಲದ ಅಥವಾ ಬೇರೆ ಎತ್ತರದಲ್ಲಿರುವ ದೃಶ್ಯಗಳನ್ನು ನೋಡಲು "ಪೆರಿಯೋಸ್ಕೋಪ್" ಗಳನ್ನು ಉಪಯೋಗಿಸುತ್ತಾರೆ.

39. ಸಬ್‌ಮೆರೀನ್‌ಗಳಲ್ಲಿ ನೀರಿನ ಮೇಲಿನ ದೃಶ್ಯಗಳನ್ನು ನೋಡಲು "ಪೆರಿಯೋಸ್ಕೋಪ್ ಗಳನ್ನು ಬಳಸುತ್ತಾರೆ.

40. ಸಮತಲದರ್ಪಣ ವನ್ನು ಸೌರಒಲೆಗಳಲ್ಲಿ ಸೂರ್ಯನ ಕಿರಣಗಳು ಒಲೆಯ ಒಳಭಾಗಕ್ಕೆ ಪ್ರತಿಫಲಿಸಲು ಉಪಯೋಗಿಸುತ್ತಾರೆ.

41. ನುಣುಪಾದ ಮೆರಗುಗೊಳಿಸಿದ ಮೇಲ್ಮೈಯನ್ನು ದರ್ಪಣ ಎನ್ನುತ್ತಾರೆ.

42. ಸಮತಲ ದರ್ಪಣವನ್ನು ಸೂಕ್ಷ್ಮ ದರ್ಶಕದಲ್ಲಿ ಬೆಳಕನ್ನು ವಸ್ತುವಿನ ಮೇಲೆ ಬೀಳುವಂತೆ ಮಾಡಲು ಉಪಯೋಗಿಸುತ್ತಾರೆ.

43. ಕಿರಣಗಳು ತಗ್ಗಿನ ಭಾಗದ ಮೂಲಕ ಪ್ರತಿಫಲಿಸುವಂತಿದ್ದರೆ ಅದು ನಿಮ್ನದರ್ಪಣ. ಇಲ್ಲಿ ಕಿರಣಗಳು ಕೇಂದ್ರೀಕೃತವಾಗುತ್ತದೆ.

44. ಕಿರಣಗಳು ಉಬ್ಬಿನ ಭಾಗದ ಮೂಲಕ ಪ್ರತಿಫಲಿಸುವಂತಿದ್ದರೆ ಅದು ಪೀನ ದರ್ಪಣ, ಇಲ್ಲಿ ಕಿರಣಗಳು ಚೆದುರುತ್ತವೆ.

45. ನಿಮ್ನದರ್ಪಣದ ಪ್ರಧಾನ ಅಕ್ಷದ ಸಮಾಂತರವಾಗಿ ಚಲಿಸುವ ಯಾವುದೇ ಕಿರಣವು ಪ್ರತಿಫಲನದ ಬಳಿಕ ಪ್ರಧಾನ ಸಂಗಮದ ಮೂಲಕ ಹಾದು ಹೋಗುತ್ತದೆ.

46. ನಿಮ್ನ ದರ್ಪಣದಲ್ಲಿ ಉಂಟಾಗುವ ಪ್ರತಿಬಿಂಬವು ಸತ್ಯ ಪ್ರತಿಬಿಂಬವಾಗಿದ್ದು, ಸ್ಥಾನವನ್ನು ಅನುಸರಿಸಿ ವಸ್ತುವಿನ ಗಾತ್ರದಲ್ಲಿ ವ್ಯತ್ಯಾಸವುಂಟಾಗುತ್ತದೆ. ಪ್ರತಿಬಿಂಬವು ತಲೆಕೆಳಗಾಗಿರುತ್ತದೆ. (ಫಿಲಂ ಪ್ರೋಜೆಕ್ಟರ್)

47. ಪೀನದರ್ಪಣದಲ್ಲಿ ಪ್ರತಿಬಿಂಬವು ಮಿಥ್ಯಾ ಪ್ರತಿಬಿಂಬವಾಗಿದ್ದು, ನೇರವಾಗಿರುತ್ತದೆ. ಮತ್ತು ವಸ್ತುವಿಗಿಂತ ಚಿಕ್ಕದಾಗಿರುತ್ತದೆ.

48. ಸತ್ಯಪ್ರತಿಬಿಂಬವು ತಲೆಕೆಳಗಾಗಿ ಕಾಣುತ್ತದೆ – ನಿಮ್ನ

49. ಮಿಥ್ಯಾ ಪ್ರತಿಬಿಂಬ ನೇರವಾಗಿ ಕಾಣುತ್ತದೆ ಮತ್ತು ಗಾತ್ರ ಒಕ್ಕದಾಗಿರುತ್ತದೆ. – ಪೀನ

50. ಟಾರ್ಚ್ ಲೈಟ್ ಮತ್ತು ಹೆಡ್ ಲೈಟ್‌ಗಳಲ್ಲಿ ಬಲ್ಬನ್ನು ಪ್ರಧಾನ ಸಂಗಮದಲ್ಲಿಟ್ಟಿರುತ್ತಾರೆ. ಇದರಿಂದ ಬೆಳಕು ಪ್ರತಿಫಲಿಸಿ ಸಮಾಂತರವಾಗಿ ಚಲಿಸುತ್ತದೆ.

51. ಪೀನದರ್ಪಣವು ವಸ್ತುವಿನ ಒಕ್ಕದಾದ ಪ್ರತಿಬಿಂಬವನ್ನು ಮೂಡಿಸುತ್ತದೆ.

52. ಪೀನದರ್ಪಣವನ್ನು ವಾಹನದ ಹಿನ್ನೋಟವಾಗಿ ಬಳಸುತ್ತಾರೆ. ಮತ್ತು ಬೀದಿದೀಪಗಳಲ್ಲಿ ಬಳಸುತ್ತಾರೆ.

53."ಕೆಲಡಿಯೋಸ್ಕೋಪ್" (ಬಹುರೂಪದರ್ಶಕ) – ಆವರ್ತ ಪ್ರತಿಫಲನದಿಂದ ಆಕರ್ಶಕ ವಿನ್ಯಾಸಗಳನ್ನು ಪಡೆಯಲು ಉಪಯೋಗಿಸುತ್ತಾರೆ.

54. ನಾಯಿಕೊಡೆ ಬ್ಯಾಕ್ಟೀರಿಯಾಗಳು ತಮ್ಮ ಆಹಾರಕ್ಕಾಗಿ ಸಾವಯವ ಪದಾರ್ಥಗಳನ್ನು ಅವಲಂಬಿಸಿದೆ ಇವುಗಳನ್ನು ಕೊಳೆತಿನಿಗಳು ಎನ್ನುವರು.

55. ಕೀಟಹಾರಿ ಸಸ್ಯಗಳು "ಸಸಾರಜನಕದ ಕೊರತೆಯಿಂದ ಕೀಟಹಾರಿ ಸಸ್ಯಗಳನ್ನು ಅವಲಂಬಿಸಿದೆ. ಉದಾ: ನೊಣದಬೋನು, ಹೂಜಿಗಿಡ, ಇಬ್ಬನಿಗಿಡ.

56. ಅಮಿಬಾ ತಮ್ಮ ಆಹಾರವನ್ನು ಮಿಥ್ಯಾಪಾದಗಳ ಸಹಾಯದಿಂದ ನೀರಿನಿಂದ ಪಡೆಯುತ್ತವೆ.

57. ಹೈಡ್ರಾ ಒಂದು ಸರಳ ಬಹುಕೋಶೀಯ ಜೀವಿ. ಇದು ಸ್ಪರ್ಶಾಂಗಗಳ ಸಹಾಯದಿಂದ ಅಹಾರವನ್ನು ಹಿಡಿಯುತ್ತವೆ. ಇವೆರಡರ ಉಸಿರಾಟವನ್ನು ವಿಸರಣಾ ಕ್ರಿಯೆ ಎಂದು ಕರೆಯುತ್ತಾರೆ.

58. ಎರೆಹುಳು, ಜಿರಲೆ, ಮೀನು, ಕಪ್ಪೆ, ಮುಂತಾದ ಮೇಲ್ಮಟ್ಟದ ಜೀವಿಗಳಲ್ಲಿ ನಿರ್ದಿಷ್ಟ ಅಂಗಗಳ ಮೂಲಕ ಜೀರ್ಣಕ್ರಿಯೆ ನಡೆಯುತ್ತದೆ.

59. ಉಸಿರಾಟವೆಂಬ ಜೀವಕ್ರಿಯೆಯಿಂದ ಶಕ್ತಿಯು ಬಿಡುಗಡೆಯಾಗುತ್ತದೆ. ಇಲ್ಲಿ ರಾಸಾಯನಿಕ ಶಕ್ತಿಯು ಶಾಖ ಶಕ್ತಿಯಾಗಿ ಬಿಡುಗಡೆಯಾಗುತ್ತದೆ.

60. ಶಿಲಿಂದ್ರ, ಬ್ಯಾಕ್ಟೀರಿಯಾಗಳು ಆಮ್ಲಜನಕದ ಸಹಾಯವಿಲ್ಲದೆ ಉಸಿರಾಡಬಲ್ಲವು.

61. ಸಸ್ಯಗಳು ಉಸಿರಾಟ ಕ್ರಿಯೆಯಲ್ಲಿ ಆಮ್ಲಜನಕವನ್ನು ಉಪಯೋಗಿಸುತ್ತವೆ. ದ್ಯುತಿಸಂಶ್ಲೇಶಣೆ ಕ್ರಿಯೆಯಲ್ಲಿ ಇಂಗಾಲದ-ಡೈ-ಆಕ್ಸೈಡ್ ಅನ್ನು ಉಪಯೋಗಿಸುತ್ತವೆ. ಅಂದರೆ ಸಸ್ಯಗಳು ರಾತ್ರಿ ಇಂಗಾಲದ-ಡೈ-ಆಕ್ಸೈಡ್ ಬಿಡುಗಡೆಗೊಳಸುತ್ತವೆ. ಹಗಲಿನಲ್ಲಿ ಆಮ್ಲಜನಕವನ್ನು ಬಿಡುಗಡೆಗೊಳಸುತ್ತವೆ.

62. ಅಮೀಬಾ ಮತ್ತು ಹೈಡ್ರಾ ಉಸಿರಾಟ ಕ್ರಿಯೆಗೆ ವಿಶೇಷ ಅಂಗಗಳಿಲ್ಲ. ಇವು ವಿಸರಣೆಯಿಂದ ಉಸಿರಾಡುತ್ತವೆ.

63. ಎರೆಹುಳು, ಜಿಗಣೆ ಇವುಗಳಿಗೂ ಉಸಿರಾಟ ಕ್ರಿಯೆಗೆ ವಿಶೇಷ ಅಂಗಗಳಿಲ್ಲ. ತೇವಭರಿತ ಚರ್ಮದಿಂದ ವಿಸರಣಕ್ರಿಯೆಯಿಂದ ಉಸಿರಾಡುತ್ತವೆ.

64. ಭೂವಾಸಿ ಕಪ್ಪೆಯು ತೇವಭರಿತ ಚರ್ಮ ಮತ್ತು ಶ್ವಾಸಕೋಶದಿಂದ ಉಸಿರಾಡುತ್ತದೆ.

65. ಸೇವಿಸುವ ಆಹಾರ ಜೀವಕೋಶಗಳ ಕ್ರಿಯೆಗೆ ಅತ್ಯವಶ್ಯಕವಾದದ್ದು.

66. ಏಕಕೋಶೀಯ ಜೀವಿಗಳು ಆಹಾರವನ್ನು ನೇರವಾಗಿ ಪಡೆದು ವಾತಾವರಣಕ್ಕೆ ನೇರವಾಗಿ ಬಿಡುತ್ತವೆ.

67. ಕೆಳವರ್ಗದ ಸಸ್ಯಗಳಾದ ಪಾಂಗಳಲ್ಲಿ ಆಹಾರವು ವಿಸರಣೆ ಕ್ರಿಯೆಯಿಂದ ಒಂದು ಕೋಶದಿಂದ ಮತ್ತೊಂದು ಕೋಶಕ್ಕೆ ಸಾಗಿಸಲ್ಪಡುತ್ತದೆ.

68. ಮಾನವ ದೇಹದಲ್ಲಿ ಸಾಗಾಣಿಕಾ ವ್ಯೂಹದಲ್ಲಿ ಸಾಗಾಣಿಕಾ ವ್ಯೂಹದಲ್ಲಿ ಹೃದಯ, ರಕ್ತನಾಳ, ರಕ್ತವನ್ನು ಒಳಗೊಂಡ ಸಾಗಾಣಿಕ ವ್ಯೂಹವಿದೆ.

69. ಅಪಧಮನಿಗಳಲ್ಲಿ ಹರಿಯುವಾಗ ರಕ್ತ ಅಲೆಗಳಂತಹ ಚಲನೆ ಉಂಟಾಗುತ್ತದೆ. ಇದನ್ನು ನಾಡಿ ಎಂದು ಕರೆಯುತ್ತಾರೆ.

70. ಅಭಿದಮನಿ, ಅಪಧಮನಿ, ಲೋಮನಾಳ ಇವು ಹೃದಯದ ರಕ್ತನಾಳಗಳು.

71. ಆಮ್ಲಜನಕ ರಹಿತ ರಕ್ತ ಶ್ವಾಸಕ ಪರಿಚಲನೆಯಲ್ಲಿರುತ್ತದೆ.

72. ಆಮ್ಲಜನಕ ಸಹಿತ ರಕ್ತ ದೈಹಿಕ ಪರಿಚಲನೆಯಲ್ಲಿರುತ್ತದೆ.

73. ರಕ್ತ ದ್ರವರೂಪದ ಅಂಗಾಂಶವಾಗಿದೆ, ರಕ್ತವನ್ನು 4 ಭಾಗಗಳಾಗಿ ವಿಂಗಡಿಸಲಾಗಿದೆ. ರಕ್ತದಲ್ಲಿ ದ್ರವರೂಪದ ರಕ್ತ, ಘನರೂಪದ ರಕ್ತ ಎಂದು ವಿಂಗಡಿಸಬಹುದು.
ಪ್ಲಾಸ್ಮಾ, ಕೆಂಪು ರಕ್ತ ಕಣ, ಬಿಳಿ ರಕ್ತ ಕಣ, ಮತ್ತು ಕಿರುತಟ್ಟೆ, ಇವು ರಕ್ತದ 4 ವಿಧಗಳು.



74.ಪ್ಲಾಸ್ಮಾ – ದ್ರವರೂಪದ ರಕ್ತವಾಗಿದೆ. ಇದರಲ್ಲಿ ಶೇ. ೯೦ % ಬಾಗ ನೀರು ಇದೆ.




75.ಕೆಂಪುರಕ್ತ ಕಣ – ಇದು ಘನರೂಪದ್ದಾಗಿದೆ. ಹಿಮೋಗ್ಲೋಬಿನ್ ಎಂಬ ಕೆಂಪು ವರ್ಣಕವನ್ನು ಹೊಂದಿದೆ. ಇದು ಆಮ್ಲಜನಕವನ್ನು ದೇಹದ ನಾನಾ ಭಾಗಗಳಿಗೆ ಕೊಂಡೊಯ್ಯುತ್ತದೆ.

76. ಬಿಳಿರಕ್ತ ಕಣ – ಇದು ಘನರೂಪದ್ದಾಗಿದೆ. ರೋಗಾಣುಗಳನ್ನು ನಾಶಪಡಿಸುತ್ತದೆ.

77.ಕಿರುತಟ್ಟೆ – ಘನರೂಪವನ್ನು ಹೊಂದಿದೆ. ರಕ್ತ ಹೆಪ್ಪುಗಟ್ಟಲ್ಲು ಸಹಾಯ ಮಾಡುತ್ತದೆ. (ವಿಟಮೀನ್–ಕೆ)

www.vidyachetan.in

78. ಪ್ಲಾಸ್ಮಾ ಮತ್ತು ಕೆಂಪು ರಕ್ತಕಣಗಳಲ್ಲಿರುವ ಅಂಟಿಜೆನ್ ಮತ್ತು ಆಂಟಿಬಾಡಿಗಳೆಂಬ ಸಸಾರಜನಕಗಳ ಆಧಾರದ ಮೇಲೆ ರಕ್ತವನ್ನು 4 ಗುಂಪುಗಳಾಗಿ ವಿಂಗಡಿಸಬಹುದು. (ಎ.ಬಿ.ಒ ಮತ್ತು ಎಬಿ)

79. ಶಸ್ತ್ರಕ್ರಿಯೆಯ ನಂತರ ರೋಗಿಗೆ ರಕ್ತವನ್ನು ನೀಡುವುದಕ್ಕೆ 'ರಕ್ತಪೂರಣ' ಎನ್ನುವರು.

80. ರಕ್ತದ ಬಣ್ಣ ಮಾನವನಲ್ಲಿ –ಕೆಂಪು, ಜಿರಲೆ – ಬಿಳಿ, ಸೀಗಡಿಮೀನು – ಹಸಿರು, ನಕ್ಷತ್ರ ಮೀನು – ನೀಲಿ

81. ಪ್ರಾಣಿಗಳಂತೆ ಸಸ್ಯಗಳು ಉಸಿರಾಟಕ್ಕೆ ಆಮ್ಲಜನಕವನ್ನು ಉಪಯೋಗಿಸುತ್ತವೆ.

ಬ್ಯಾಕ್ಟೀರಿಯಾ, ಬಂತುಹುಳು, ಕೊಕ್ಕೆಹುಳು, ಇವು ಸಜೀವಿಗಳಿಂದ ಆಹಾರ ಪಡೆಯುತ್ತವೆ.

ಇವುಗಳನ್ನು ಪರೋಪಜೀವಿಗಳೆಂದು ಕರೆಯುತ್ತಾರೆ. (PARASITES)

## ಪ್ರಾಣಿಗಳಲ್ಲಿ ನರವ್ಯೂಹ

'ಸೆರಬ್ರಮ್' ಜ್ಞಾನೇಂದ್ರಿಯಗಳ ಸಂದೇಶವನ್ನು ಗ್ರಹಿಸುತ್ತದೆ. ಹಾಗೂ ಜ್ಞಾಪಕದ ಕೇಂದ್ರವಾಗಿರುವುದು ಮುಮ್ಮೆದುಳು ಇದು ಅತಿ ಗಟ್ಟಿಯಾದ ದೊಡ್ಡದಾಗಿರುತ್ತದೆ.

೮೨. ಹಿಮ್ಮೆದುಳು' ಇದು ಸ್ನಾಯುಗಳ ಚಟುವಟಿಕೆಯನ್ನು ನಿಯಂತ್ರಿಸುತ್ತದೆ.

೮೩. ಪ್ರಚೋದನೆಗೆ ತಕ್ಕ ಪ್ರತಿಕ್ರಿಯೆ ವ್ಯಕ್ತಪಡಿಸಲು ಸರವ್ಯೂಹ ಸಹಾಯ ಮಾಡುತ್ತದೆ.

೮೪. ಅಮಿಭಾ ತನ್ನ ಕೋಶಪೊರೆಯಿಂದ ಅಥವಾ ಕೋಶದ ಮೇಲ್ಮೈಯಿಂದ ಪ್ರಚೋದನೆಯನ್ನು ಗ್ರಹಿಸುತ್ತದೆ. ಪ್ಲನೇರಿಯಾ ನರಗ್ರಂಥಿಗಳಿಂದ, ಎರೆಹುಳು ಮತ್ತು ಕೀಟಗಳಲ್ಲಿ ನರಗ್ರಂಥಿಗಳಿಂದ ಆದ ಮೆದುಳು ಇರುತ್ತದೆ.

೮೫. ಹೈಡ್ರಾ, ಪ್ಲನೇರಿಯಾ, ಸರಳ ಬಹುಕೋಶೀಯ ಜೀವಿಗಳಾಗಿವೆ.

೮೬. ಮೀನು, ಕಪ್ಪೆ, ಪಕ್ಷಿ, ಸರಿಸೃಪ, ಸಸ್ತನಿಗಳಲ್ಲಿ ಸಂಕೀರ್ಣವಾದ ನರವ್ಯೂಹವಿರುತ್ತದೆ.

೮೭. ಮಾನವ ಮೆದುಳಿನಲ್ಲಿ "ಮುಮ್ಮೆದುಳು ಅತ್ಯಂತ ದೊಡ್ಡದಾಗಿದೆ. ಇದು ಜ್ಞಾನೇಂ ದ್ರಿಯಾಗಳಿಂದ ಬರುವ ಸಂದೇಶಗಳನ್ನು ಗ್ರಹಿಸುತ್ತದೆ. ಇದು ಜ್ಞಾಪಕಶಕ್ತಿಯ ಕೇಂದ್ರವಾಗಿದೆ.

೮೮. ಮದ್ಯದ ಮೆದುಳು ಮುಮ್ಮೆದುಳು ಮತ್ತು ಹಿಮ್ಮೆದಳನ್ನು ಸೇರಿಸುತ್ತದೆ.

೮೯. ' ಜ್ಞಾನವಾಹಿ' ನರಗಳನ್ನು ಮೆದುಳಿಗೆ ಸಂದೇಶಗಳನ್ನು ರವಾನಿಸುತ್ತದೆ. ಮೆದುಳಿನ ಪ್ರತಿಕ್ರಿಯೆಗಳನ್ನು 'ಕ್ರಿಯಾವಾಹಿ' ನರಗಳಿಗೆ ತಲುಪಿಸುವಲ್ಲಿ ' ಮೆದುಳುಬಳ್ಳಿ ' ಸಹಾಯ ಮಡುತ್ತದೆ.

೯೦. ಜ್ಞಾನವಾಹಿ ನಗರಳು ಸಂದೇಶಗಳನ್ನು ಮೆದುಳಿಗೆ ತಲುಪಿಸುತ್ತೆ. ಕ್ರಯಾವಾಹಿ ನಗರಳು ಪ್ರತಿಕ್ರಿಯೆಯನ್ನು ಸ್ನಾಯು ಹಾಗು ಗ್ರಂಥಿಗಳಿಗೆ ತಿಳಿಸುತ್ತೆ.

೯೧. ಸಸ್ಯಗಳು ಪ್ರಚೋದನೆಗೆ ತಕ್ಕ ಪ್ರತಿಕ್ರಿಯೆಯನ್ನು "ಹಾರ್ಮೋನುಗಳಿಂದ ಮಾಡುತ್ತವೆ. ಸಸ್ಯಗಳಲ್ಲಿ ನರವ್ಯೂಹ ಕಂಡುಬರುವುದಿಲ್ಲ.

೯೨. ಸಸ್ಯಗಳು ಪ್ರಚೋದನೆಗೆ ತಕ್ಕ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತವೆ ಎಂದು ಮೊದಲಬಾರಿಗೆ ತೋರಿಸಿಕೊಟ್ಟವರು – ಸರ್. ಜಗದೀಶ್ ಚಂದ್ರಬೋಸ್

೯೩. ಸಸ್ಯಗಳಲ್ಲಿ ಬರುವಂತಹ ಕೆಲವು ಹಾರ್ಮೋನುಗಳೆಂದರೆ– ಆಕ್ಸಿನ್, ಜಿಬ್ಬರಿಲಿನ್, ಸೈಟೋಕೈನಿ ನ್.

೯೪. ಪ್ರಚೋದನೆಗಳಿಂದ ಚಲನೆಯುಂಟಾಗುತ್ತದೆ. ಉದಾ: ಸಸ್ಯಗಳು ಚಲಿಸುವುದಿಲ್ಲ, ಆದರೆ ಸಸ್ಯದ ಭಾಗಗಳಲ್ಲಿ ಚಲನೆಯುಂಟಾಗುತ್ತದೆ.

೯೫. ಲಿಂಗಾಣುಗಳೆಂಬ ಏಕಕೋಶೀಯ ರಚನೆಗಳ ಸಂಯೋಗದಿಂದ ಸಂತಾನೋತ್ಪತ್ತಿ ನಡೆಯುವುದನ್ನು "ಲಿಂಗರೀತಿಯ ಸಂತಾನೋತ್ಪತ್ತಿ' ಎನ್ನುವರು. ಜೀವಿಗಳಲ್ಲಿ ಲಿಂಗಾಣುಗಳ ರಚನೆಯಲ್ಲಿ ವ್ಯತ್ಯಾಸ ಕಂಡುಬರುತ್ತದೆ.

೯೬. ಪ್ರಾಣಿಗಳಲ್ಲಿ 4 ವಿಧಧ ಚಲನೆ ಕಾಣಬರುತ್ತದೆ.

1. ಕೋಶಾಂತಂಕ ಚಲನೆ – ಕೋಶ ವಿಭಜನೆಯ ಸಂದರ್ಭದಲ್ಲಿ
2. ಅಮಿಭಾ ಮಾದರಿ ಚಲನೆ– ಕೋಶದ ಚಲನೆಯಿಂದ ವಿಥ್ಯ ಪಾದ ಉಂಟಾಗಿ
3. ಕಶಾಂಗ ಮತ್ತು ರೋಮಿಕ ಭಾಗಗಳಿಂದ ಚಲನೆ – ಉದಾ: ಯೂಗ್ಲೀನಾ ಮತ್ತು ಪ್ಯಾರಾಮೀಸಿಯಂ
4. ಸ್ನಾಯಿಕ ಚಲನೆ – ಮೇಲ್ಮಟ್ಟದ ಜೀವಿಗಳಲ್ಲಿ

೨. ಸಸ್ಯಗಳು ಕೂಡ ಲಿಂಗರೀತಿಯ ಸಂತಾನೋತ್ಪತ್ತಿ ಮಾಡುತ್ತದೆ.

೩. ಸಸ್ಯದ ಸಂತಾನೋತ್ಪತ್ತಿ ಭಾಗ ' ಹೂ '

4. ಹೂವಿನ ಗಂಡು ಭಾಗ – ಕೇಸರ, ಹೆಣ್ಣು ಭಾಗ – ಶಲಾಕ

೫. ಒಂದೇ ಹೂವಿನಲ್ಲಿ ಕೇಸರ ಮತ್ತು ಶಲಾಕ ಎರಡು ಇದ್ದರೆ ಅದು ದ್ವಿಲಿಂಗ ಪುಷ್ಪ. ಉದಾ: ದಾಸವಾಳ

೬. ಒಂದು ಹೂವಿನಲ್ಲಿ ಶಲಾಕ ಅಥವಾ ಕೇಸರ ಒಂದು ಮಾತ್ರ ಇದ್ದರೆ ಅದು ಏಕಲಿಂಗ ಪುಷ್ಪ ಉದಾ: ಕುಂಬಳ

## :: ಪ್ರಾಣಿಗಳಲ್ಲಿ ಸಂತಾನೋತ್ಪತ್ತಿ ::

೭. ವಿರ್ಯಾಣುಗಳು ವೃಷಣಗಳಲ್ಲಿ ಉತ್ಪತ್ತಿಯಾಗುತ್ತವೆ.

೮. ಪುರುಷ ಮತ್ತು ಸ್ತ್ರೀ ಜನನಾಂಗಗಳು ಒಂದೇ ಪ್ರಾಣಿಯಲ್ಲಿದ್ದರೆ ಅದು ದ್ವಿಲಿಂಗ ಪ್ರಾಣಿ ಉದಾ: ಎರೆಹುಳು, ಮತ್ತು ಹೈಡ್ರಾ

೯. ವಿರ್ಯಾಣು ಮತ್ತು ಅಂಡಾಣುಗಳ ಸಂಯೋಗ ಜೀವಿಯ ದೇಹದ ಹೊರಭಾಗದಲ್ಲಿ ನಡೆದರೆ ಅದು ಬಾಹ್ಯ ಗರ್ಭದಾರಣೆ ಉದಾ; ಮೀನು ಮತ್ತು ಕಪ್ಪೆ

೧೦. ಸಸ್ತನಿ ಸರಿಸ್ರುಪ, ಪಕ್ಷಿಗಳಲ್ಲಿ ಒಳಗರ್ಭದಾರಣೆ ನಡೆಯುತ್ತದೆ.

೧1. ಮಾನವನಲ್ಲಿ ಗಭಾವಧಿಯ ಕಾಲ '೩೮ ವಾರ'

## :: ನೀರು ::

೧೨. ನೀರಿನ ಘಟಕಗಳನ್ನು ವೋಲ್ಟಾಮೀಟರ್ ಸಹಾಯದಿಂದ ಪರೀಕ್ಷಿಸಬಹುದು

13.ನೀರು ೦ ° C ತಾಪದಲ್ಲಿ ಘನೀಕರಿಸುತ್ತದೆ.

14. ಮಂಜುಗಡ್ಡೆಯ ಸಾಂದ್ರತೆ ನೀರಿನ ಸಾಂದ್ರತೆಗಿಂತ ಕಡಿಮೆ ಇರುವುದರಿಂದ ಮಂಜುಗಡ್ಡೆ ನೀರಿನಲ್ಲಿ ತೇಲುತ್ತದೆ.

15. ನೀರು ಘನೀಕರಿಸಿದಾಗ ಅದು ಮಂಜುಗಡ್ಡೆಯಾಗಿ ವಿಸ್ತಾರಗೊಳ್ಳುತ್ತದೆ.

16. 4 ° C ನಲ್ಲಿ ಗಾತ್ರ ಕನಿಷ್ಠವಾಗುತ್ತದೆ ಮತ್ತು ಮಂಜುಗಡ್ಡೆ ಉಷ್ಣನಿರೋಧಕ.

17. ನೀರು ಲೋಹಗಳೊಂದಿಗೆ ವರ್ತಿಸಿ ಆಕ್ಸೈಡ್ ಹೈಡ್ರಾಕ್ಸೈಡ್‌ಗಳನ್ನು ಉಂಟುಮಾಡಿ ಜಲಜನಕವನ್ನು ಬಿಡುಗಡೆಗೊಳಿಸುತ್ತದೆ.

18. ಇಂಗಾಲದ- ಡೈ-ಆಕ್ಸೈಡ್ ನೀರಿನಲ್ಲಿ ಕರಗಿದರೆ ಇಂಗಾಲದ ಆಮ್ಲ ಉಂಟಾಗುತ್ತದೆ.

19. ಗಂಧಕದ ಡೈ ಆಕ್ಸೈಡ್ ನೀರಿನಲ್ಲಿ ಕರಗಿದರೆ ಗಂಧಕದ ಆಮ್ಲ ಉಂಟಾಗುತ್ತದೆ.

20. ನಿರ್ದಿಷ್ಟ ಉಷ್ಣತೆಯಲ್ಲಿ ಗರಿಷ್ಟ ಪ್ರಮಾಣದ ದ್ರವ್ಯವನ್ನು ಕರಗಿಸಿಕೊಳ್ಳುವ ದ್ರಾವಣವನ್ನು 'ಪ್ರರ್ಯಾಪ್ತ ದ್ರಾವಣ' ಎಂದು ಕರೆಯುವರು. ಉದಾ: ನೀರು

21. 'ಭಟ್ಟಿ ಇಳಿಸುವಿಕೆ' ಯಿಂದ ನೀರನ್ನು ಕರಗುವ ಲವಣಗಳಿಂದ ಮುಕ್ತಗೊಳಿಸಬಹುದು.

22. ಭಟ್ಟಿ ಇಳಿಸಿದ ನೀರು ಕುಡಿಯಲು ಯೋಗ್ಯವಲ್ಲ. ಕಾರಣ ಅದು ನಮ್ಮ ದೇಹದಲ್ಲಿರುವ ರಾಸಾಯನಿಕ ವಸ್ತುಗಳನ್ನು ಕರಗಿಸುತ್ತದೆ. ಸ್ವಲ್ಪ ಅಡಿಗೆ ಉಪ್ಪು ಬಳಸಿ ಕುಡಿಯಬಹುದು.

23. 0' ಯಿಂದ 4' C ಗೆ ನೀರು ಕಾಯಿಸಿದಾಗ ನೀರು ಸಂಕುಚಿತವಾಗುತ್ತದೆ. 4' C ಯಿಂದ 0' C ನವರೆಗೆ ನೀರು ವಿಕಾಸವಾಗುತ್ತೆ.

24. ಸೂರ್ಯನ ಶಾಖ ಶಕ್ತಿಯಿಂದಾಗಿ ಎಲ್ಲಾ ಜೈವಿಕ ಕ್ರಿಯೆಗಳು ನಡೆಯುತ್ತವೆ.

25. ಸೂರ್ಯನ ಮೇಲ್ಮೈ ಶಾಖ – 6000 'C

26. ಶಾಖವನ್ನು ಅಳೆಯುವ ಏಕಮಾನ – ಕ್ಯಾಲರಿ ಮತ್ತು ಜೌಲ್

27. 1 ಕ್ಯಾಲೋರಿ = 4.2 ಜೌಲ್

28. ವಸ್ತುಗಳ ಉಷ್ಣಗ್ರಹಣ ಸಾಮರ್ಥ್ಯ ವೈವಿದ್ಯವಾಗಿರುತ್ತದೆ.

29. ಒಂದು ಗ್ರಾಂ ವಸ್ತುವಿನ ತಾಪವನ್ನು ಒಂದು ಸೆಂಟಿಗ್ರೇಡ್ ಹೆಚ್ಚಿಸಲು ಕೊಡಬೇಕಾದ ಶಾಖ ಆ ವಸ್ತುವಿನ 'ಉಷ್ಣಗ್ರಹಣ ಶಕ್ತಿ' ಎನ್ನುತ್ತೇವೆ.

30. ಶಾಖದಿಂದ ವಸ್ತುಗಳ ಸ್ಥಿತಿ ಬದಲಾಗುತ್ತದೆ.

31. ನೀರಿನ ಕುದಿಯುವ ಬಿಂದು 100 ° C

32. ನೀರು ಬಾಷ್ಪ ಗುಪ್ತೋಷ್ಣವಾಗಲು 540 ಕ್ಯಾಲೋರಿ/ ಗ್ರಾಂ ಶಾಖ ಕೊಡಬೇಕಾಗುತ್ತದೆ.

33.ಮಂಜುಗಡ್ಡೆಯ ಕುದಿಯುವ ಬಿಂದು 0˚ C ಇದನ್ನು ದ್ರವೀಕರಣ ಗುಪ್ತೋಷ್ಣ ಎನ್ನುತ್ತಾರೆ. ಮಂಜುಗಡ್ಡೆ ನೀರಾಗಲು ಕೊಡಬೇಕಾದ ಶಾಖ 80 ಕ್ಯಾಲೋರಿ/ ಗ್ರಾಂ.

34. ಶಾಖದಿಂದ ವಸ್ತುಗಳು ವಿಕಾಸವಾಗುತ್ತದೆ. ಸ್ಥಿತಿ ಬದಲಾಗುತ್ತದೆ. ಶಾಖ ವರ್ಗಾವಣೆಯಾಗುತ್ತದೆ.

35. ಅಣುಗಳ ಕಂಪನದಿಂದ ಶಾಖವು ವರ್ಗಾವಣೆಯಾಗುವುದನ್ನು ಉಷ್ಣವಹನ ಅಥವಾ ವಹನ ಕ್ರಿಯೆ ಎನ್ನುತ್ತಾರೆ.

36.ಅಣುಗಳು ಕೆಳಗಿನಿಂದ ಮೇಲಕ್ಕೆ, ಮೇಲಿನಿಂದ ಕೆಳಕ್ಕೆ ಚಲಿಸುವುದನ್ನು ಸಂವಹನ ಎನ್ನುವರು.

*14*

37. ಶಾಖವು ಮದ್ಯವರ್ತಿಯ ಸಹಾಯವಿಲ್ಲದೆ ಬಿಸಿಯಾದ ವಸ್ತುವಿನಿಂದ ತಣ್ಣನೆಯ ವಸ್ತುವಿಗೆ ವರ್ಗಾವಣೆಯಾಗುವುದನ್ನು ವಿಕೀರಣ ಎನ್ನುವರು.

38.ಉಷ್ಣತೆಯ ಏಕಮಾನ – ಕ್ಯಾಲೋರಿ

39. ಪೌಷ್ಠಿಕಾಂಶಗಳು ಒದಗಿಸುವ ಶಕ್ತಿಯನ್ನು ಕಿಲೋ ಕ್ಯಾಲೋರಿ ಯಲ್ಲಿ ಅಳೆಯುತ್ತಾರೆ.

40. ಅತೀ ಬಿಸಿಯಾದ ಮತ್ತು ಅತೀ ತಂಪಾದ ಆಹಾರ ಸೇವನೆಯಿಂದ ಹಾರ್ಮೋನುಗಳು ಸರಿಯಾಗಿ ಕಾರ್ಯ ನಿರ್ವಹಿಸುವುದಿಲ್ಲ.

## ಅನುವಂಶೀಯವಾಗಿ ಬರುವ ರೋಗಗಳು:

41.ಹಿಮೋಫಿಲಿಯಾ – ಈ ರೋಗದಿಂದ ರಕ್ತ ಹೆಪ್ಪುಗಟ್ಟುವುದಿಲ್ಲ.

42.ವರ್ಣಾಂಧತೆ – ಈ ರೋಗವಿರುವರು ಹಸಿರು ಕೆಂಪುಬಣ್ಣವನ್ನು ಗುರುತಿಸುವುದಿಲ್ಲ.

43. ಕಿವುಡುತನ, ಮೂಗುತನ, ಕುರುಡುತನ ಇವು ಕ್ರಿಯಾ ನ್ಯೂನ್ಯತೆಯಿಂದ ಬರುವಂತ ರೋಗಗಳು

44. ಅಂಗನ್ಯೂನ್ಯತೆಯ ರೋಗಗಳು ಅನುವಂಶೀಯವಲ್ಲ.

45. ಗಾಳಿ ಒಂದು ಮಿಶ್ರಣವಾವಿದ್ದು, ಅದು ಸ್ಥಳದಿಂದ ಸ್ಥಳಕ್ಕೆ ಕಾಲದಿಂದ ಕಾಲಕ್ಕೆ ವ್ಯತ್ಯಾಸ ಹೊಂದುತ್ತದೆ.

46. ಗಾಳಿಯ ಪ್ರಮುಖ ಘಟಕ ಸಾರಜನಕ ಮತ್ತು ಆಮ್ಲಜನಕ.

47.ಗಾಳಿಯಲ್ಲಿರುವ ಇತರೆ ಅನಿಲಗಳು – ಆರ್ಗಾನ್, ನಿಯಾನ್, ಕ್ಸೆಯಾನ್, ಕ್ರಿಪ್ಟಾನ್, ಹೀಲಿಯಂ, ಇಂಗಾಲದ ಡೈ ಆಕ್ಸೈಡ್, ಮಾನಾಕ್ಸೈಡ್, ಜಲಜನಕದ ಸಲ್ಫೇಡ್‌ಗಳು.

48. ಗಾಳಿಯಲ್ಲಿ ಸಾರಜನಕದ ಪ್ರಮಾಣ 78 % ಇದು ಸಾಮಾನ್ಯ ಸಂದರ್ಭಗಳಲ್ಲಿ ಕ್ರಿಯಾಶೀಲವಲ್ಲ, ದಹನಾನುಕೂಲವಿಲ್ಲ.

49. ಗಾಳಿಯಲ್ಲಿರುವ ಮಿಶ್ರಣದಲ್ಲಿ ಅತ್ಯಂತ ಕ್ರಿಯಾಶೀಲವದದ್ದು, ಆಮ್ಲಜನಕ, ಇದರ ಪ್ರಮಾಣ 21 %

50. ಸಾರಜನಕವು ಆಮ್ಲಜನಕದ ಕ್ರಿಯಾಶೀಲತೆಯನ್ನು ದುರ್ಬಲಗೊಳಿಸುತ್ತದೆ. ಇಲ್ಲದಿದ್ದರೆ ಆಮ್ಲಜನಕದಿಂದ ಭೂಮಿಯ ಮೇಲಿರುವ ವಸ್ತುಗಳು ಉರಿದುಹೋಗುತ್ತಿದ್ದವು.

51. ಗಾಳಿಯಲ್ಲಿ ಇಂಗಾಲದ ಡೈ ಆಕ್ಸೈಡ್ ಪ್ರಮಾಣ 0.03% ವಾತಾವರಣದಲ್ಲಿ ಇದರ ಪ್ರಮಾಣ ಹೆಚ್ಚಾದರೆ 'ಹಸಿರುಮನೆ' ಪರಿಣಾಮ ಉಂಟಾಗುತ್ತದೆ.

52. ಇಂಗಾಲದ ಡೈ ಆಕ್ಸೈಡ್‌ನ್ನು ತಂಪುಪಾನಿಯಗಳಲ್ಲಿ ಮಾಂಸ, ಮೀನು, ಸಂರಕ್ಷಣೆಯಲ್ಲಿ ಬಳಸುತ್ತಾರೆ.

53.ಆರ್ಗಾನ್ – ವಿದ್ಯುತ್ ದೀಪ. ನಿಯಾನ್ – ಜಾಹಿರಾತು ದೀಪಗಳಲ್ಲಿ ಉಪಯೋಗಿಸುತ್ತಾರೆ.

54. ಗಾಳಿಯಲ್ಲಿರುವ ನೀರಾವಿ ರಾತ್ರಿ ತಂಪುಗೊಂಡು ದ್ರವದ ಹನಿಗಳಾಗಿ ಬೀಳುತ್ತಾ ಹೋಗುತ್ತದೆ.

55. ಗಾಳಿಯಲ್ಲಿ ನೀರಾವಿ ಸ್ಥಳದಿಂದ ಸ್ಥಳಕ್ಕೆ ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಹೋಗುತ್ತದೆ. ಇದರ ಗರಿಷ್ಠ ಮಟ್ಟ ಶೇ 4 ರಿಂದ 5. ಇದು ಉಷ್ಣತೆ ಮತ್ತು ಎತ್ತರವನ್ನು ಅವಲಂಬಿಸಿದೆ.

56. ಸನಿಲಗಳನ್ನು ದ್ರವರೂಪಕ್ಕೆ ತಂದಾಗ ಅವುಗಳ ಗಾತ್ರ ಕಡಿಮೆಯಾಗುತ್ತದೆ. ಹೀಗಾಗಿ ಅನಿಲವನ್ನು ಸಿಲಿಂಡರ್‌ಗಳಲ್ಲಿ ಶೇಖರಿಸುತ್ತಾರೆ.

57. ದ್ರವ್ಯವು 4 ಸ್ಥಿತಿಯಲ್ಲಿರುತ್ತದೆ.

58. ದ್ರವ ಆಮ್ಲಜನಕ, ದ್ರವ ಸಾರಜನಕವನ್ನು ಮೀನು ಮಾಂಸ ಮತ್ತಿತರ ಆಹಾರ ಪದಾರ್ಥಗಳ ಸಂರಕ್ಷಣೆಗಾಗಿ ಬಳಸುತ್ತಾರೆ.

59. ದ್ರವ ಜಲಜನಕ, ದ್ರವ ಆಮ್ಲಜನಕವನ್ನು ರಾಕೇಟ್‌ಗಳಲ್ಲಿ ಇಂದನಕ್ಕಾಗಿ ಬಳಸುತ್ತಾರೆ.

60. ದ್ರವ ಹೀಲಿಯಂ ಅನ್ನು ಅಂತರಿಕ್ಷಯಾನದ ಬಲೂನು ಪ್ರಯೋಗದಲ್ಲಿ ಕಲೆರಹಿತ ಉಕ್ಕು ಲೋಹಗಳ ಬೆಸುಗೆಯಲ್ಲಿ ಉಪಯೋಗಿಸುತ್ತಾರೆ...

61. ನೀರು ಲೋಹಗಳೊಂದಿಗೆ ವರ್ತಿಸಿ ಅವುಗಳು ಹೈಡ್ರಾಕ್ಸೈಡ್ ಉಂಟು ಮಾಡುತ್ತವೆ.

62. ತರಕಾರಿಗಳು ಕೊಳೆತಾಗ ಜಲಜನಕದ ಸಲ್ಫೈಡ್ ಅನೀಲವನ್ನು ಬಿಡುಗಡೆ ಮಾಡುತ್ತದೆ.

63. ಇಂಗಾಲದ ಡೈಆಕ್ಸೈಡ್ ಮಾನಾಕ್ಸೈಡ್ ನೈಟ್ರಸ್ ಆಕ್ಸೈಡ್ ಕ್ಲೋರೋಫ್ಲೋರೋ ಕಾರ್ಬನ್ ಮೀಥೇನ್ ಇವು ಹಸಿರು ಮನೆ ಅನೀಲಗಳು

64. ಇಂಗಾಲದ ಮಾನಾಕ್ಸೈಡ್ ಸೇವನೆಯಿಂದ ಉಸಿರಾಟದ ತೊಂದರೆ ಉಂಟುಮಾಡುತ್ತದೆ. ಇದು ರಕ್ತದಲ್ಲಿರುವ ಹಿಮೋಗ್ಲೋಬಿನ್ ಜೊತೆ ಸಂಯೋಗ ಹೊಂದಿ ಆಮ್ಲಜನಕದ ಸರಬರಾಜನ್ನು ಕಡಿಮೆ ಮಾಡುತ್ತದೆ.

65. ಗಂಧಕದ ಡೈ ಆಕ್ಸೈಡ್ ಕಣ್ಣಿನ ತೊಂದರೆ ಉಂಟು ಮಾಡುತ್ತದೆ. ಇದು ಮಳೆ ನೀರಿನಲ್ಲಿ ಕರಗಿ ಆಮ್ಲ ಮಳೆ ಉಂಟಾಗುತ್ತದೆ.

66. ವಸ್ತುಗಳ ಕಂಪನದಿಂದ ಶಬ್ದ ಉತ್ಪತ್ತಿಯಾಗುತ್ತದೆ.

67. ಕಂಪನಾಂಕವನ್ನು ಅಳೆಯುವ ಮಾನ ಹರ್ಟ್ಸ್

68. ಒಂದು ಸೆಕೆಂಡಿನಲ್ಲಿ ಉಂಟಾಗುವ ಕಂಪನಗಳನ್ನು ಕಂಪನಾಂಕ ಎಂದು ಕರೆಯುತ್ತಾರೆ.

69. ಮನುಷ್ಯನ ಶಬ್ದಗಳ ಕಂಪನಾಂಕ 20 ರಿಂದ 20,000 ಹರ್ಟ್ಸ್

70. ಕಂಪನಗಳು ಕಿವಿಯ ತಮಟೆಯ ತಾಗಿದಾಗ ಮಾತ್ರ ಶಬ್ದಗಳು ಕೇಳಿಸುತ್ತವೆ.

71. ಶಬ್ದವು ಗಾಳಿಯಲ್ಲಿ ಒಂದು ಸೆಕೆಂಡಿಗೆ 330 ಮೀಟರ್ ಚಲಿಸುತ್ತದೆ.

72. ವಸ್ತು ಕಂಡ ನಂತರ ಶಬ್ದ ಕೇಳಿಸುತ್ತದೆ. ಕಾರಣ ಶಬ್ದಕ್ಕಿಂತ ಬೆಳಕಿನ ವೇಗ ಹೆಚ್ಚು.

73. ಬೆಳಕಿನಂತೆ ಶಬ್ದವು ಕೂಡ ಸಮಾನ ಕೋನದಲ್ಲಿದ್ದಾಗ ಪ್ರತಿಫಲಿಸುತ್ತದೆ.

74. ಶಬ್ದವು ಪ್ರತಿಫಲನ ಹೊಂದಿದಾಗ ಪ್ರತಿಧ್ವನಿಯಾಗುತ್ತದೆ.

75. ಶಬ್ದವು ಮಾನವನ ಕಿವಿಯಲ್ಲಿ 1/10 ಸೆಕೆಂಡುಗಳ ಕಾಲ ನಿಲ್ಲುತ್ತದೆ. ಪ್ರತಿಧ್ವನಿ ಉಂಟಾಗಬೇಕಾದರೆ ಪ್ರತಿಫಲಿಸುವ ಮೇಲ್ಮೈ ಶಬ್ದ ಉಂಟಾಗುವ ಸ್ಥಳದಿಂದ 17 ಮೀಟರ್ ದೂರವಿರಬೇಕು.

76. 20 ಕಂಪನಕ್ಕಿಂತ ಕಡಿಮೆ ಆವರ್ತ ಸಂಖ್ಯೆಯ ಶಬ್ದ ಆಶ್ರವ್ಯ ಶಬ್ದ, 20,000 ಕಂಪನಕ್ಕಿಂತ ಆವರ್ತ ಸಂಖ್ಯೆ ಹೆಚ್ಚಿದರೆ ಶ್ರವಣಾತೀತ ಶಬ್ದ ಎನ್ನುವರು.

77. ಶಹನಾಯಿ-ನಾದಸ್ವರ, ಕೊಳಲು-ವಾಯುಕಂಪಿತ

78. ವಾದ್ಯಗಳು. ಸಿತಾರ, ತಂತಿ ವಾದ್ಯ ಮೃದಂಗ ಮರ್ದನ ವಾದ್ಯ.

## ಆಮ್ಲ

79. ಜಲಜನಕ+ ಆಮ್ಲಜನಕ -> ಜಲಜನಕದ ಆಕ್ಸೈಡ್, ಜಲಜನಕದ ಆಕ್ಸೈಡ್= ನೀರು.

80. ಕಂದು ಬಣ್ಣದ ತುಕ್ಕು= ಕಬ್ಬಿಣದ ಆಕ್ಸೈಡ್

81. ಆಮ್ಲಕನಕ ಲೋಹಗಳೊಂದಿಗೆ ವರ್ತಿಸಿದರೆ ಲೋಹೀಯ ಆಕ್ಸೈಡ್ ಉಂಟಾಗುತ್ತದೆ. ಅಲೋಹಗಳೊಂದಿಗೆ ವರ್ತಿಸಿದರೆ ಅಲೋಹಿತ ಆಕ್ಸೈಡ್‌ಗಳನ್ನು ಉಂಟುಮಾಡುತ್ತದೆ.

82. ಅಲೋಹಿಯ ಆಕ್ಸೈಡ್‌ಗಳು->ಆಮ್ಲೀಯ ಆಕ್ಸೈಡ್, ಲೋಹೀಯ ಆಕ್ಸೈಡ್‌ಗಳು-> ಪ್ರತ್ಯಾಮ್ಲೀಯ ಆಕ್ಸೈಡ್
83. ದ್ರಾವಣದ ಬಣ್ಣ ಪರಿವರ್ತನೆ ಹೊಂದುವುದು ಆಮ್ಲತೆಯ ಗುಣವಾಗಿದೆ.
84. ಆಮೀಯ ಆಕ್ಸೈಡ್‌ಗಳು ನೀರಿನಲ್ಲಿ ಕರಗಿ ಆಮ್ಲಗಳು ಉಂಟಾಗುತ್ತದೆ.
85. ಆಮ್ಲಗಳು ನೀಲಿ ಲಿಟ್ಮಸ್ ಕಾಗದಳನ್ನು ಕೆಂಪು ಬಣ್ಣಕ್ಕೆ ತಿರುಗಿಸುತ್ತದೆ. ಪ್ರತ್ಯಾಮ್ಲಗಳು ಕೆಂಪು ಲಿಟ್ಮಸ್ ಕಾಗದವನ್ನು ನೀಲಿ ಬಣ್ಣಕ್ಕೆ ತಿರುಗಿಸುತ್ತದೆ.
86. ಪ್ರತ್ಯಾಮ್ಲೀಯ ಆಕ್ಸೈಡ್ ನೀರಿನಲ್ಲಿ ಕರಗಿ ಪ್ರತ್ಯಾಮ್ಲ ಉಂಟು ಮಾಡುತ್ತದೆ.
87. ಆಮ್ಲ ಲೋಹಗಳೊಂದಿಗೆ ವರ್ತಿಸಿದರೆ ಜಲಜನಕ ಬಿಡುಗಡೆಯಾಗುತ್ತದೆ.
88. ಆಮ್ಲ ಪ್ರತ್ಯಾಮ್ಲದೊಂದಿಗೆ ವರ್ತಿಸಿ ಲವಣ + ನೀರು ಬಿಡುಗಡೆಯಾಗುತ್ತದೆ.
89. ಆಮ್ಲದಲ್ಲಿರುವ ಜಲಜನಕದ ಪರಮಾಣುಗಳು ಲೋಹಗಳಿಂದ ಸ್ಥಾನಪಲ್ಲಟಗೊಳ್ಳುತ್ತದೆ.
90. ಆಮ್ಲ ಕಾರ್ಬೋನೇಟುಗಳೊಂದಿಗೆ ವರ್ತಿಸಿ ಇಂಗಾಲದ ಡೈ ಆಕ್ಸೈಡ್ ಬಿಡುಗಡೆಗೊಳಿಸುತ್ತದೆ.
91. ಜಲಜನಕ ಇದು ಒಂದು ದಹ್ಯ ವಸ್ತು, ಇದು ಹತ್ತಿಕೊಂಡು ಉರಿಯುತ್ತದೆ.
92. ಹೈಡ್ರಾಕ್ಸೈಡ್‌ಗಳು ಪ್ರತ್ಯಾಮ್ಲಗಳಾಗಿರುತ್ತದೆ.
93. ಕಾರ್ಬನಿಕ್ ಆಮ್ಲಗಳನ್ನು ಮೃದು ಪಾನೀಯಗಳಲ್ಲಿ ಉಪಯೋಗಿಸುತ್ತಾರೆ.
94. ತುಕ್ಕು ನಿವಾರಿಸಲು ಹೈಡ್ರೋಕ್ಲೋರಿಕ್ ಆಮ್ಲವನ್ನು ಉಪಯೋಗಿಸುತ್ತಾರೆ.
95. TNT & TNG -> ಸಿಡಿಮದ್ದು ಇವುಗಳ ತಯಾರಿಕೆಯಲ್ಲಿ ನೈಟ್ರಿಕ್ ಆಮ್ಲವನ್ನು ಉಪಯೋಗಿಸುತ್ತಾರೆ. www.vidyachetan.in
TNT -> ಟ್ರೈ ನೈಟ್ರೋ ಟಾಲೀನ್ TNG ->ಟ್ರೈ ನೈಟ್ರೋ ಗ್ಲಿಸರಿನ್
96. ಪಾಸ್ಪರಿಕ್ ಆಮ್ಲ, ಆಸ್ಪರಿಕ್ ಆಮ್ಲ, ಅಮೋನಿಯಂ ನೈಟ್ರೆಟ್, ಕ್ಯಾಲ್ಸಿಯಂ ನೈಟ್ರೇಟ್ ಗಳ ತಯಾರಿಕೆಯಲ್ಲಿ -> ನೈಟ್ರಿಕ್ ಆಮ್ಲವನ್ನು ಉಪಯೋಗಿಸುತ್ತಾರೆ.
97. ಮಿನಿಗರ್ ನಲ್ಲಿ ಅಸಿಟಿಕ್ ಆಮ್ಲವಿರುತ್ತದೆ.
98. ಪ್ರಬಲ ನೈಟ್ರಿಕ್ ಆಮ್ಲ ಮತ್ತು ಪ್ರಬಲ ಹೈಡ್ರೋಕ್ಲೋರಿಕ್ ಆಮ್ಲಗಳ 1:3 ಗಳ ಮಿಶ್ರಣವನ್ನು ದ್ರವಗಳ ರಾಜ ಎಂದು ಕರೆಯುವರು.
99. ನೀರಿನಲ್ಲಿ ಕರಗುವ ಲೋಹದ ಆಕ್ಸೈಡ್‌ಗಳನ್ನು ಕ್ಷಾರಗಳು ಎನ್ನುವರು. ಅಂದರೆ ಇವುಗಳಲ್ಲಿ ಲೋಹವಿರುವುದಿಲ್ಲ. ಆದರೆ ಇವು ಪ್ರತ್ಯಾಮ್ಲಗಳು ಹೌದು.
100. ಪ್ರತ್ಯಾಮ್ಲಗಳು ಕಹಿ ರುಚಿಯನ್ನು ಹೊಂದಿರುತ್ತದೆ.

101. ಪ್ರತ್ಯಾಮ್ಲಗಳು ಇಂಗಾಲದ ಡೈ ಆಕ್ಸೈಡ್‌ಗಳನ್ನು ಹೀರಿಕೊಂಡು ಕಾರ್ಬೋನೇಟುಗಳನ್ನು ಉತ್ಪತ್ತಿ ಮಾಡುತ್ತದೆ.

102. ಕ್ಷಾರಿಯ ದ್ರಾವಣಗಳು ಅಮೋನಿಯಂ ಲವಣಗಳೊಂದಿಗೆ ವರ್ತಿಸಿ ಅಮೋನಿಯಾ ಅನೀಲಗಳನ್ನು ಬಿಡುಗಡೆಗೊಳಸುತ್ತದೆ.

103. ಹುಣಸೆ ಹಣ್ಣು ಮತ್ತು ನಲ್ಲಿಕಾಯಿ ಇದು ಟಾರ್ಟಾರಿಕ್ ಆಮ್ಲ.

104. ಟೊಮೊಟೊ ಹಣ್ಣು– ಆಕ್ಸಾಲಿಕ್ ಆಮ್ಲ

105. ಸಾಬೂನು ಕಾಗದ ಕೃತಕ ದಾರ, ಗ್ಲಿಸರಿನ್, ಸೋಡಾ ವಾಟರ್‌ಗಳ ತಯಾರಿಕೆಯಲ್ಲಿ ಸೋಡಿಯಂ ಹೈಡ್ರಾಕ್ಸೈಡ್ ಉಪಯೋಗಿಸುತ್ತಾರೆ.

106. ನೀರನ್ನು ಮೃದುಗೊಳಸಲು, ಮಣ್ಣಿನ ಆಮ್ಲತೆಯನ್ನು ಕಡಿಮೆಗೊಳಸಲು ಕ್ಯಾಲ್ಸಿಯಂ ಹೈಡ್ರಾಕ್ಸೈಡ್ ಅನ್ನು ಉಪಯೋಗಿಸುತ್ತಾರೆ.

107. ಚಲುವೆ ಪುಡಿ ಅಥವಾ ಬ್ಲೀಚಿಂಗ್ ಪೌಡರ್ – ಕ್ಯಾಲ್ಸಿಯಂ ಆಕ್ಸಿ ಕ್ಲೋರೈಡ್

108. ಅಲ್ಯುಮಿನಿಯಂ ಹೈಡ್ರಾಕ್ಸೈಡ್ ಮತ್ತು ಮೆಗ್ನಿಷಿಯಂ ಹೈಡ್ರಾಕ್ಸೈಡ್ ಅನ್ನು ಆಮ್ಲ ನಿರೋಧಕವಾಗಿ ಔಷಧಿಗಳಲ್ಲಿ ಉಪಯೋಗಿಸುತ್ತಾರೆ.

109. ಸೋಡಿಯಂ ಹೈಡ್ರಾಕ್ಸೈಡ್ ಇದನ್ನು ಕಾಸ್ಟಿಕ್ ಸೋಡ ಎಂದು ಕರೆಯುತ್ತಾರೆ.

110. ಪೊಟ್ಯಾಸಿಯಂ ಹೈಡ್ರಾಕ್ಸೈಡ್ ಇದು ಕಾಸ್ಟಿಕ್ ಪೊಟ್ಯಾಷ್

111. ಆಮ್ಲ ಮತ್ತು ಪ್ರತ್ಯಾಮ್ಲಗಳು ನೀರಿನಲ್ಲಿ ವರ್ತಿಸಿ ಆಮ್ಲವೂ ಅಲ್ಲದ ಪ್ರತ್ಯಾಮ್ಲವೂ ಅಲ್ಲದ ಲವಣಗಳನ್ನು ಉತ್ಪತ್ತಿ ಮಾಡುವುದಕ್ಕೆ ತಟಸ್ಥೀಕರಣ ಎನ್ನುವರು.

112. ಸಲ್ಫೈಡ್ , ನೈಟ್ರೇಡ್, ಕಾರ್ಬೋನಿಕ್, ಕ್ಲೋರೈಡ್ ಇವೆಲ್ಲವು ಲವಣಗಳು ಅಂದರೆ ಆಮ್ಲವೂ ಅಲ್ಲ, ಪ್ರತ್ಯಾಮ್ಲವೂ ಅಲ್ಲ.

113. ಲವಣಗಳು ತಟಸ್ಥೀಕರಣ ಕ್ರಿಯೆಯಿಂದ ಉಂಟಾಗುತ್ತದೆ.

114. ಸೋಡಿಯಂ ಕಾರ್ಬೋನೇಟ್ ಅಥವಾ ವಾಷಿಂಗ್ ಸೋಡಾ – $NA_2$ $CO_3$ ಇದರ ಉಪಯೋಗ ನೀರು ಮೃದುಗೊಳಸಲು ಮತ್ತು ಬಟ್ಟೆ ತೊಳೆಯಲು.

115. ಸೋಡಿಯಂ ಬೈಕಾರ್ಬೋನೇಟ್ ಆಥವಾ ಅಡಿಗೆ ಸೋಡಾ – NAH $CO_3$ ಬೇಕಿಂಗ್ ಪುಡಿ ತಯಾರಿಸಲು ಉಪಯೋಗಿಸುತ್ತಾರೆ. ಇದನ್ನು ಬ್ರೆಡ್ ಬನ್ನುಗಳ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ. ಅಗ್ನಿಶಾಮಕ ಯಂತ್ರಗಳಲ್ಲಿಯೂ ಉಪಯೋಗಿಸುತ್ತಾರೆ.

116. ಸೋಡಿಯಂ ಕ್ಲೋರೈಡ್ – ಅಡಿಗೆ ಉಪ್ಪು (NACL)

117. ಅಮೋನಿಯಂ ಕ್ಲೋರೈಡ್ ($NH_4CL$)

118. ಪೊಟ್ಯಾಷಿಯಂ ನೈಟ್ರೇಟ್($KHO_3$) ಮದ್ದಿನ ಪುಡಿ, ಗಾಜು, ಕೃತಕ ಗೊಬ್ಬರಗಳ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ.

119. ಕ್ಯಾಲ್ಸಿಯಂ ಕಾರ್ಬೋನೆಟ್ ($CACO_3$)

120. ತಾಮ್ರದ ಸಲ್ಫೇಟ್ ($C_4$ $SO_4$) ತಾಮ್ರದ ವೋಲ್ಟಾಮೀಟರಿನಲ್ಲಿ ಉಪಯೋಗಿಸುತ್ತಾರೆ.

121. ಪೊಟ್ಯಾಷ್ ಪಟಿಕ -> ($K_2$ $SO_4$ $AL_2(SO_4)_3$ $4H_2O$) ಇದನ್ನು 'ಯುಗ್ಮ ಲವಣ' ಎನ್ನುವರು, ಇದನ್ನು ಕುಡಿಯುವ ನೀರು ಶುದ್ಧಿಕರಿಸಲು, ಗಾಯಕ್ಕೆ ಹಚ್ಚಲು, ಚರ್ಮದ ಕೈಗಾರಿಕೆಗಳಲ್ಲಿ ಉಪಯೋಗಿಸುತ್ತಾರೆ.

122. ಕ್ಯಾಲ್ಸಿಯಂ ಕಾರ್ಬೋನೇಟ್ ($CaCO_3$) -> ಸಿಮೆಂಟ್ ತಯಾರಿಕೆಯಲ್ಲಿ, ಕಬ್ಬಿಣದ ಅ ದಿರಿನಿಂದ ಕಬ್ಬಿಣವನ್ನು ಬೇರ್ಪಡಿಸಲು ಉಪಯೋಗಿಸುತ್ತಾರೆ.

ಕ್ಯಾಲ್ಸಿಯಂ ಆಕ್ಸಿಕ್ಲೋರೈಡ್ -> ಚೆಲುವೆಪುಡಿ

ಸೋಡಿಯಂ ಬೈಕಾರ್ಬೋನೇಟ್ -> ಬೇಕಿಂಗ್ ಪುಡಿ (ಅಡುಗೆ ಸೋಡಾ/ಬೇಕಿಂಗ್ ಪುಡಿ)

123. IRS → Indian Remote Sensing Satellites (ದೂರ ಸಂವೇದಿ ಉಪಗ್ರಹ)

124. ಪ್ರಚನ್ನ ಶಕ್ತಿಯನ್ನು 'ವಿಭವಶಕ್ತಿ' ಎಂತಲೂ ಕರೆಯುವರು.

125. ಕೆಂಪು ಮಣ್ಣು-> ಇದರಲ್ಲಿ ಕಬ್ಬಿಣದ ಆಕ್ಸೈಡ್ ಹೆಚ್ಚು ಇರುತ್ತದೆ. ಕಾಫಿ, ಟೀ, ಏಲಕ್ಕಿ ಚೆನ್ನಾಗಿ ಬೆಳೆಯುತ್ತಾರೆ.

126. ಕಪ್ಪು ಮಣ್ಣು-> ಅತ್ಯಂತ ಉತ್ಕೃಷ್ಟವಾದ ಮಣ್ಣು, ಇದು ಉತ್ತರ ಕರ್ನಾಟಕದಲ್ಲಿ ಕಂಡುಬರುತ್ತದೆ. ಇದರಲ್ಲಿ ಹತ್ತಿ, ಶೇಂಗಾ, ಕಬ್ಬು ಹೊಗೆಸೊಪ್ಪು ಬೆಳೆಯುತ್ತಾರೆ.

127. ಮೆಕ್ಕಲು ಮಣ್ಣು -> ನದಿಯಿಂದ ಹರಿದುಬಂದ ಮಣ್ಣು.

128. ವಾಯುರಾನ್, ಸಿಮಜಿನ್, ಮ್ಯಾರ್ಬೆನ್ -> ಉದಯಪೂರ್ಣ ಕಳೆನಾಶಕಗಳು

129. ಮಿಶ್ರ ಬೆಳೆಯಿಂದ ಫಲವತ್ತತೆ ಹೆಚ್ಚುತ್ತದೆ.

ಉದಾ : ರಾಗಿಯೊಂದಿಗೆ ಅವರೆ, ಕಬ್ಬಿನೊಂದಿಗೆ ಶುಂಠಿ, ಅಡಿಕೆ ತೋಟದಲ್ಲಿ ಏಲಕ್ಕಿ, ಮೆಣಸು, ವೆನಿಲ್ಲಾ ಕಾಯಿ, ವಿಳ್ಳೆದೆಲೆ.

130. ಸರದಿಬೆಳೆಯಲ್ಲಿ ಒಂದು ಬೆಳೆ ಉಪಯೋಗಿಸಿದ ಪೋಷಕಾಂಶಗಳನ್ನು ಮತ್ತೊಂದು ಬೆಳೆ ಮರುದುಂಬಿಸುತ್ತದೆ. ಉದಾ: ಏಕದಳ ಮತ್ತು ದ್ವಿದಳ

131. ಮುಂಗಾರು ಬೆಳೆ ಜೂನ್ ಮತ್ತು ಜುಲೈನಲ್ಲಿ ಬಿತ್ತನೆ ಮಾಡುತ್ತಾರೆ. ಇದನ್ನು 'ಖಾರೀಫ್' ಬೆಳೆ ಎನ್ನುತ್ತಾರೆ. ಉದಾ: ಭತ್ತ, ಶೇಂಗಾ, ಬೇಳೆಗಳು, ಮೆಣಸು.

132. 'ರೈಜೋಬಿಯಂ' ಬ್ಯಾಕ್ಟೀರಿಯಾ ವಾತಾವರಣದಲ್ಲಿರುವ ಸಾರಜನಕವನ್ನು ಉಪಯೋಗಿಸಿ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುತ್ತದೆ. ಇದು ದ್ವಿದಳ ದಾನ್ಯಗಳ ಬೇರುಗಳಲ್ಲಿ ಇರುತ್ತದೆ.

133. 'ಹಾರ್ವೆಸ್ಟರ್ ಕಂಬೈನ್ (ಒಕ್ಕಣಿ ಯಂತ್ರ) ಇದನ್ನು ಕಾಳನ್ನು ಕಸಕಡ್ಡಿಯಿಂದ ಬೇರ್ಪಡಿಸಲು ಉಪಯೋಗಿಸುತ್ತಾರೆ. Harvester Combain

134. ಬ್ಯಾಕ್ಟೀರಿಯಾ ಮುಂತಾದ ಸೂಕ್ಷ್ಮಾಣು ಜೀವಿಗಳ ಚಟುವಟಿಕೆಯ ಮೂಲಕ ಸಸ್ಯ ಮತ್ತು ಪ್ರಾಣಿಜನ್ಯ ತ್ಯಾಜ್ಯ ಕೊಳೆಯಿಸಿ ಪಡೆಯುವ ಪದಾರ್ಥವೆ ಸಾವಯವ ಗೊಬ್ಬರ.

135. ಜೈವಿಕ ಕ್ರಿಯೆಗಳಿಂದ ಗೊಬ್ಬರ ದೊರಕುವುದನ್ನು ಜೈವಿಕ ಗೊಬ್ಬರ ಎಂದು ಕರೆಯುವರು. ಈ ಕ್ರಿಯೆಯಲ್ಲಿ ಭಾಗವಹಿಸುವ ಬ್ಯಾಕ್ಟೀರಿಯಾಗಳೆಂದರೆ – ರೈಜೋಬಿಯಂ, ವೆಜೋಸ್ಟಾರಿಲ್ಲಂ,

## ೮ನೇ ತರಗತಿ ವಿಜ್ಞಾನ

136. ಮ್ಯಾಗ್ನಟೈಟ್ ಕಬ್ಬಿಣದ ಅದಿರು- ನೈಸರ್ಗಿಕ ಕಾಂತ

137. ದಂಡಕಾಂತ, ಲಾಳಕಾಂತ, ಸೂಜಿಕಾಂತ, ಇವುಗಳು ಕೃತಕ ಕಾಂತಗಳು

138. ದಂಡಕಾಂತ, ಪ್ಯಾರಕಾಂತೀಯ, ಫೇರೋಕಾಂತೀಯ ಇವು ಕಾಂತಿಯ ವಸ್ತುಗಳ ವಿಧಗಳು

139. ಅಲ್ಯುಮಿನಿಯಂ, ಕ್ರೋಮಿಯಂ, ಕಾಪರ್ ಸಲ್ಫೇಟ್, ಪ್ಲಾಟೀನಂ ಇವು ಪ್ಯಾರಾ ಕಾಂತಿಯ ವಸ್ತುಗಳು.

140. ಯಾಂತ್ರಿಕ ವಿಧಾನ ಮತ್ತು ವಿದ್ಯುತ್ ವಿಧಾನದಿಂದ ಕೃತಕ ಕಾಂತಗಳನ್ನು ತಯಾರಿಸಬಹುದು.

141. ವಿದ್ಯುತ್ ವಿಧಾನದಿಂದ ಕೃತಕ ಕಾಂತಗಳನ್ನು ತಯಾರಿಸುವುದಕ್ಕೆ 'ಎಲೆಕ್ಟ್ರೋಮ್ಯಾಗ್ನೆಟ್' ಎನ್ನುವರು.

142. ಎರಡು ದಂಡಕಾಂತಗಳನ್ನು ಅವುಗಳ ವಿರುದ್ಧ ದಿಕ್ಕಿನಲ್ಲಿ ಇಟ್ಟು ಅವುಗಳ ಮದ್ಯೆ ಒಂದು ಮರದ ತುಂಡು ಇರಿಸಿ ಕಾಂತವನ್ನು ರಕ್ಷಿಸುತ್ತಾರೆ.

143. ವಿದ್ಯುತ್ಚ್ಛಕ್ತಿಯನ್ನು ಅಳೆಯುವ ಅಂತರಾಷ್ಟ್ರೀಯ ಏಕಮಾನ – ಜೌಲ್ 1 ಕಿಜೆ = 1000 ಜೆ

144. ಶಾಖವು 'ಶಕ್ತಿಯ ಒಂದು ರೂಪ' ಎಂದು ತೋರಿಸಿಕೊಟ್ಟವರು – ಜೂಲ್

145. ವಿದ್ಯುತ್ ಸಾಮರ್ಥ್ಯವನ್ನು ಕಂಡುಹಿಡಿಯುವ ಸೂತ್ರ $P = \frac{E}{T}$

146. ವಿದ್ಯುತ್ ಸಾಮರ್ಥ್ಯದ ಅಂತರಾಷ್ಟ್ರೀಯ ಏಕಮಾನ - ವ್ಯಾಟ್

147. ವ್ಯಾಟ್ = ಒಂದು ಉಪಕರಣ, ಒಂದು ಸೆಕೆಂಡಿನಲ್ಲಿ ಒಂದು ಜೂಲ್ ಬಳಸಿದರೆ ವ್ಯಾಟ್ ಆಗುತ್ತದೆ.

148. ವಿದ್ಯುತ್ಚ್ಛಕ್ತಿಯ ವ್ಯವಹಾರಿ ಏಕಮಾನ Kwh = $3600000KJ^{-1}$

149. ವಿದ್ಯುತ್ ಫೀಜ್ –> ಸೀಸ ಮತ್ತು ತವರದಿಂದ ಮಾಡಲ್ಪಟ್ಟಿದೆ. ಇದರ ರೋಧಕ ಹೆಚ್ಚು, ದ್ರವನಬಿಂದು ಕಡಿಮೆ

150. ವಿದ್ಯುತ್ ದೀಪ –> ಉಷ್ಣೋತ್ವನ್ನ ಪರಿಣಾಮ ತತ್ವದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತದೆ.

151. ವಿದ್ಯುತ್ ದೀಪದಲ್ಲಿ ತಾಮ್ರದ ತಂತಿಯ ಮೂಲಕ ಟಂಗ್‌ಸ್ಟನ್ ತಂತಿಯಿಂದ ಕಟ್ಟಿರುತ್ತಾರೆ.

152. ದೀಪದ ಆಯಸ್ಸು ಹೆಚ್ಚಿಸಲು ಅದರ ಬುರುಡೆಯಲ್ಲಿ ನೈಟ್ರೋಜನ್ ತುಂಬಿರುತ್ತಾರೆ.

153. ವಿದ್ಯುತ್ ಕೋಶ ಮತ್ತು ಶುಷ್ಕಕೋಶದ ಮೂಲಕ ವಿದ್ಯುತ್ ಉತ್ಪಾದಿಸಬಹುದು.

154. ರಸಾಯನಿಕ ಶಕ್ತಿಯನ್ನು ವಿದ್ಯುತ್‌ಶಕ್ತಿಯನ್ನಾಗಿ ಪರಿವರ್ತಿಸುವ ಸಾದನ – ವಿದ್ಯುತ್ ಕೋಶ

155. ಸಂಖ್ಯಾ ಮೌಲ್ಯ ಮಾತ್ರ ಇದ್ದರೆ –> ಅದಿಶ, ಸಂಖ್ಯಾ ಮೌಲ್ಯದೊಂದಿಗೆ ದಿಕ್ಕು ಇದ್ದರೆ –> ಸದಿ ಶ

156. ಸ್ಥಾನಪಲ್ಲಟ ಎಂದರೆ ಒಂದು ಸ್ಥಳವನ್ನು ತಲುಪಲು ಇರುವ ಕನಿಷ್ಠ ಮಾರ್ಗ. ಆಂದರೆ ಇಲ್ಲಿ ದಿಕ್ಕು ಅನಿವಾರ್ಯವಾಗಿರುತ್ತದೆ.

157. ಚಲಿಸಿದ ದೂರ ಯಾವ ಮಾರ್ಗವಾದರು ಅನುಸರಿಸಿ ಸ್ಥಳವನ್ನು ತಲುಪಿರುತ್ತೆ. ಇದಕ್ಕೆ ದಿಕ್ಕು ಇರುವುದಿಲ್ಲ.

158. ಜವದ ಅಂತರಾಷ್ಟ್ರೀಯ ಏಕಮಾನ –> ಮೀ/ಸೆ/ಎಂಎಸ್$^{-1}$

159. ಜವಕ್ಕೆ ದಿಕ್ಕಿಲ್ಲ ಆದ್ದರಿಂದ ಇದು ಅದಿಶ

160. ಕಾಯದ ಸ್ಥಾನಪಲ್ಲಟದ ದರ –> ವೇಗ –> ಸದಿಶ

161. ವೇಗದ ಬದಲಾವಣೆಯ ದರವೇ 'ವೇಗೋತ್ಕರ್ಷ'

162. ವೇಗೋತ್ಕರ್ಷ ಒಂದು ಸದಿಶ ಇದರ ಅಂತರಾಷ್ಟ್ರೀಯ ಏಕಮಾನ – $MS^{-2}$ (Miter/Sec$^{-2}$)

163. ವೇಗದಲ್ಲಾಗುವ ಬದಲಾವಣೆಯನ್ನು ಕಾಲದಿಂದ ಬಾಗಿಸಿದರೆ ವೇಗೋತ್ಕರ್ಷವು ದೊರೆಯುತ್ತದೆ.

164. ಸಮ ಅವಧಿಯಲ್ಲಿ ಏಕರೀತಿಯಲ್ಲಿ ಪುನರಾವರ್ತನೆಯಾಗುವ ಚಲನೆಯನ್ನು ಆವರ್ತ ಚಲನೆ ಎನ್ನುವರು.

165. ಚಲನೆಯ ಪಥದ ಯಾವುದೇ ಬಿಂದುವನ್ನು ಯಾವ ದಿಕ್ಕಿನಲ್ಲಿ ದಾಟುತ್ತದೋ ಅದೇ ದಿಕ್ಕಿನಲ್ಲಿ ಎರಡನೆ ಬಾರಿಗೆ ದಾಟಲಾರಂಬಿಸಿದಾಗ ಒಂದು 'ಆಂದೋಲನ' ಪೂರ್ಣವಾಗುತ್ತದೆ.

166. ಏಕಮಾನ ಕಾಲದಲ್ಲಿ ಆಗುವ ಆಂದೋಲಗಳ ಸಂಖ್ಯೆಯೆ ಆಂದೋಲಗಳ ಆವೃತ್ತಿ.

167. ಅಂತಾರಾಷ್ಟ್ರೀಯ ಪದ್ದತಿಯಲ್ಲಿ ಆವೃತ್ತಿಯ ಏಕಮಾನ –> ಹರ್ಡ್ಸ್

168. ಆಂದೋಲ = 1 ಸೈಕಲ್‌ಪೌಂಡ್/ ಸೆಕೆಂಡ್

169. ಲೋಲಕದ ಗುಂಡಿನರಾಶಿ, ಸಾಂದ್ರತೆ, ತೂಕ ಇವು ಆಂದೋಲದ ಅವಧಿಯನ್ನು ಅವಲಂಬಿಸಿಲ್ಲ.

170. ಸರಳ ಲೋಲಕವನ್ನು ಕಾಲಮಾಪಕವಾಗಿ ಗುರುತ್ವ, ವೇಗೋತ್ಕರ್ಷ ಕಂಡುಹಿಡಿಯಲು ಉಪಯೋಗಿಸುತ್ತಾರೆ.

171.ಯಾಂತ್ರಿಕ ತರಂಗಗಳು ಪ್ರಸಾರವಾಗಲು ಮಾದ್ಯಮದ ಅವಶ್ಯಕತೆ ಇದೆ.

172. ಪಾರ= ಕಂಪನ ವಿಸ್ತಾರ, ಆಂದೋಲಾವಧಿ= ಕಂಪನಾವಧಿ, ಆವೃತ್ತಿ = ಕಂಪನಾಂಕ

173. ಕಂಪನದ ಗರಿಷ್ಠ ವಿಸ್ತಾರವೇ ' ಕಂಪನಾವಿಸ್ತಾರ', ಕಂಪನ ವಿಸ್ತಾರವಾಗಲು ತೆಗೆದುಕೊಂಡ ಸಮಯವೇ ಕಂಪನಾವಧಿ

174. ನಿಗಧಿತ ಸಮಯದಲ್ಲಿ ಆದ ಕಂಪನಗಳ ಸಂಖ್ಯೆಯೇ ' ಕಂಪನಾಂಕ'

175. ನೀರಿನ ತರಂಗ 'ಅಡ್ಡ ತರಂಗ' , ಗಾಳಿಯ ತರಂಗ 'ನೀಳ ತರಂಗ'

176. ತರಂಗ ಚಲನೆಯಲ್ಲಿ ಮಾದ್ಯಮದ ಕಣಗಳ ಪ್ರಸರಣ ಆಗುವುದಿಲ್ಲ ಅವುಗಳ ಸಮತೋಲಿತ ಸ್ಥಿತಿಯಲ್ಲಿ ಆದ ಪ್ರಕ್ಷುಬ್ದತೆಯ ಕಾರಣ ಅಂದರೆ ತರಂಗಚಲನೆ ಪ್ರಕ್ಷುಬ್ದತೆಯೇ ಕಾರಣ. ಅಂದರೆ ತರಂಗಚಲನೆ ಪ್ರಕ್ಷುಬ್ದತೆಯಿಂದ ಉಂಟಾಗುತ್ತದೆ.

177. ತರಂಗದ ಉದ್ದದ ಸಂಕೇತ ಲ್ಯಾಂಬ್ಡ –

178. ಎರಡು ಗರ್ತಗಳ ಅಥವಾ ಶೃಂಗಗಳ ನಡುವಿನ ಅಂತರವೇ ತರಂಗದ ಉದ್ದ 22

179. ಶಕ್ತಿಯ ಮೂಲಮಾನ – ಜೌಲ್

180. ಬಲದ ಮೂಲಮಾನ – ನ್ಯೂಟನ್

181. ಕೆಲಸವನ್ನು ಕಂಡುಹಿಡಿಯುವ ಸೂತ್ರ - W=F X S , ಕೆಸಲ = ಬಲ X ಸ್ಥಾನಪಲ್ಲಟ

182. ಮಾದ್ಯಮದ ದ್ರವಗಳ ಪ್ರಕ್ಷುಬ್ದತೆಯೇ – ತರಂಗ

183. ಅಂತರಾಷ್ಟ್ರೀಯ ಪದ್ಧತಿಯಲ್ಲಿ ಕೆಲಸದ ಏಕಮಾನ – ನ್ಯೂಟನ್ ಮೀಟರ್

184. ಉಷ್ಣ, ಶಕ್ತಿ, ಶಾಖ ಇವುಗಳ ಅಂತರಾಷ್ಟ್ರೀಯ ಮೂಲಮಾನ – ಜೌಲ್

185. ವಸ್ತುವಿನ ಭೌತ ಸ್ಥಿತಿ ಯಾವುದೇ ಆಗಿರಲಿ ಅದರಲ್ಲಿರುವ ಅಣು, ಪರಮಾಣುಗಳು ಸದಾ ಚಲನೆಯಲ್ಲಿರುತ್ತವೆ.

186. ಒಂದು ವಸ್ತುವಿನಲ್ಲಿರುವ ಅಣು ಪರಮಾಣುಗಳ ವಿವಿಧ ಚಲನೆಯ ಒಟ್ಟು ಶಕ್ತಿಯ ಮೊತ್ತ ಉಷ್ಣ= ಶಾಖ

187. ಉಷ್ಣವು ಹೆಚ್ಚಿದಂತೆ ತಾಪವು ಹೆಚ್ಚುತ್ತದೆ ಪರಮಾಣುಗಳು ಚಲಿಸುವುದರಿಂದ (ವೇಗವಾಗಿ) ಹೆಚ್ಚಾಗುತ್ತದೆ. ತಾಪ ಹೆಚ್ಚಾದಂತೆ ಪರಮಾಣುಗಳು ವೇಗವಾಗಿ ಚಲಿಸುತ್ತದೆ.

188. ದ್ರವ್ಯದ ಪರಿಮಾಣ ಹೆಚ್ಚಿದರೆ ಉಷ್ಣವು ಹೆಚ್ಚಿರುತ್ತೆ ಆದರೆ ತಾಪವು ದ್ರವ್ಯದ ಪರಿಮಾಣವನ್ನು ಅವಲಂಬಿಸಿಲ್ಲ. ಅಂದರೆ ಅಣುಗಳ ಅತ್ಯಂತ ವೇಗದ ಚಲನೆಯಿಂದ ತಾಪದ ಮಟ್ಟ ಹೆಚ್ಚುತ್ತೆ.

189. ಅಣುಗಳ ಪರಮಾಣುಗಳ ವೇಗದ ಚಲನೆಯಿಂದ ದ್ರವ್ಯರಾಶಿ ಹೆಚ್ಚಿದಂತೆ ಉಷ್ಣ ಹೆಚ್ಚಾಗುತ್ತೆ.

190. ಅಣುಗಳ ವಿವಿಧ ರೀತಿಯ ಚಲನೆಯಿಂದ ಉಷ್ಣ ಉತ್ಪತ್ತಿಯಾಗುತ್ತದೆ. ಉಷ್ಣತೆಯ ಮಟ್ಟವೇ ತಾಪ. ದ್ರವ್ಯರಾಶಿ ಹೆಚ್ಚಿದಂತೆ ಆ ವಸ್ತುವಿನ ಉಷ್ಣ ಹೆಚ್ಚಾಗುತ್ತದೆ. ಆದರೆ ತಾಪ ಅಣುಗಳ ಅತ್ಯಂತ ವೇಗದ ಚಲನೆಯನ್ನು ಅವಲಂಬಿಸಿದೆ.

191. ತಾಪವನ್ನು ಅಳೆಯುವ ಮಾನಗಳು -3 1. ಸೆಲ್ಸಿಯಸ್- 2. ಫ್ಯಾರನ್‌ಹೀಟ್ – F 3. ಕೆಲ್ವಿನ್- K

192. 4° C ನಲ್ಲಿ ನೀರು ದ್ರವರೂಪದಲ್ಲಿರುತ್ತದೆ. 4° F ನಲ್ಲಿ ನೀರು ಘನ ರೂಪದಲ್ಲಿರುತ್ತದೆ.

193. ಫ್ಯಾರನ್‌ಹೀಟ್‌ಗೆ ಪರಿವರ್ತಿಸುವ ಸೂತ್ರ = 9/5 X $C^0$+32

194. ಸೆಲ್ಸಿಯಸ್‌ಗೆ ಪರಿವರ್ತಿಸುವ ಸೂತ್ರ = 5/9 X F – 32

195. ಫ್ಯಾರನ್‌ಹೀಟ್‌ನಲ್ಲಿ ನೀರಿನ ಕುದಿಯುವ ಬಿಂದು- 212° C.– 32 F ಘನಿಸುವ ಬಿಂದು

196. ಕೆಲ್ವಿನ್ ಪದ್ಧತಿಯಲ್ಲಿ ನೀರು ಘನಿಸುವ ಬಿಂದು – 273 ಘನಿಸುವ ಬಿಂದು – 373 K

197. ಮಾನವನ ದೇಹದ ತಾಪ - 37 C, 98.4 F , 310 K

198. ಸೆಲ್ಸಿಯಸ್‌ನಿಂದ ಕೆಲ್ವಿನ್‌ಗೆ K= $C^0$ + 273

199. ಕೆಲ್ವಿನ್‌ನಿಂದ ಸೆಲ್ಸಿಯಸ್‌ಗೆ -> $C^0$ = K – 273

200. ತಾಪಮಾನವನ್ನು ಕಂಡುಹಿಡಿದ ವಿಜ್ಞಾನಿ - ಗೆಲಿಲಿಯೋ

201. ಉಷ್ಣದ ಏಕಮಾನ -> ಕ್ಯಾಲರಿ, ಉಷ್ಣದ ಅಂತರಾಷ್ಟ್ರೀಯ ಏಕಮಾನ – ಜೂಲ್ ಕ್ಯಾಲರಿ = 4.2 J

202. ಪ್ರತಿಯೊಂದು ವಸ್ತುವಿನ ಸ್ಥಿರತಾಪವನ್ನು 'ದ್ರವನ ಬಿಂದು' ಎನ್ನುವರು

203. ಉಷ್ಣ, ಶಕ್ತಿ, ಶಾಖ ಇವುಗಳ ಅಂತರಾಷ್ಟ್ರೀಯ ಏಕಮಾನ – ಜೂಲ್

204. ವೈದ್ಯಕೀಯ ತಾಪಮಾಪಕ, ಸಾಮಾನ್ಯ ತಾಪ ಮಾಪಕದಲ್ಲಿ ' ಪಾದರಸವನ್ನು' ಬಳಸುತ್ತಾರೆ. ಶೀತವಲಯದಲ್ಲಿ 'ಆಲ್ಕೋಹಾಲ್ ಇರುವ '**Dormo Meter**' ಬಳಸುತ್ತಾರೆ.

205. ನಿರ್ವಾತದಲ್ಲಿ ಬೆಳಕಿನ ವೇಗ – 3 x $10^8$ MS

206. ಬೆಳಕು ಒಂದು ಮಾದ್ಯಮದಿಂದ ಮತ್ತೊಂದು ಮಾದ್ಯಮಕ್ಕೆ ಚಲಿಸುವಾಗ ಆ ಮಾದ್ಯಮದ ಮೇಲ್ಮೈಯನ್ನು ಬೇರ್ಪಡಿಸಲು ಅದು ತನ್ನ ದಿಕ್ಕನ್ನು ಬದಲಿಸುತ್ತದೆ. ಇದನ್ನು 'ಬೆಳಕಿನ ವಕ್ರಿಭವನ' ಎನ್ನುವರು

207. ಬೆಳಕಿನ ವಕ್ರಿಭವನದ ನಿಯಮಗಳು :

-> ಪತನ ಕಿರಣ, ವಕ್ರಿಮ ಕಿರಣ, ಎರಡು ಮಾದ್ಯಮಗಳನ್ನು ಪ್ರತ್ಯೇಕಿಸುವ ಮೈ ಮೇಲಿನ ಫಲನ ಬಿಂದುವಿಗೆ ಎಳೆದ ಲಂಬ ಇವು ಮೂರು ಒಂದೇ ಸಮತಲದಲ್ಲಿರುತ್ತದೆ.

208. ಪತನ ಕೋನದ ಸೈನು, ವಕ್ರಿಮ ಕೋನದ ಸೈನುಗಳ ನಡುವಿನ ನಿಷ್ಪತ್ತಿ ಸ್ಥಿರವಾಗಿರುತ್ತದೆ.

ಇದನ್ನು ವಕ್ರಿಭವನ ಸೂಚ್ಯಂಕ ಎನ್ನುವರು – $\mu$ ( ಮ್ಯೂ)

209. ಪತನ ಕೋನ ದೊಡ್ಡದಾಗುತ್ತ ಹೋದಂತೆ ವಕ್ರಿಮಕೋನ 90 ಆದಾಗ ಬೆಳಕು ವಕ್ರೀಭವಿಸುವುದಿಲ್ಲ. ಇದು ಸಂಪೂರ್ಣ ಆಂತರಿಕ ಪ್ರತಿಫಲನ ಉಂಟಾಗುತ್ತದೆ. ಆದ್ದರಿಂದ ನೀರಿನಲ್ಲಿ 90 ಯಲ್ಲಿ ನಿಲ್ಲಿಸಿದ ಕೋಲು ಬಾಗಿದಂತೆ ಕಾಣಿಸುವುದಿಲ್ಲ.

210. ಬೆಳಕಿನ ಸಂಪೂರ್ಣ ಆಂತರಿಕ ಪ್ರತಿಫಲನದ ಅನ್ವಯಗಳು:

- ➔ ಸೂಕ್ಷ್ಮದರ್ಶಕ, ದೂರದರ್ಶಕ, ದುರ್ಬೀನ್,
- ➔ ದ್ಯುತಿ, ತಂತು ಕೇಬಲ್
- ➔ ಬೈಸಿಕಲ್ ಹಿಂಬಾಗದಲ್ಲಿ ಪ್ರತಿಫಲಕ
- ➔ ವಜ್ರಕ್ಕೆ ಪ್ರಖರವಾದ ಹೊಳಪು ನೀಡುವಲ್ಲಿ

211. ಕಾಮನಬಿಲ್ಲು ಆಂತರಿಕ ಪ್ರತಿಫಲನ ನಿಯಮವನ್ನು ಅನುಸರಿಸಿಕೊಂಡು ಮೂಡುತ್ತದೆ.

212. ಕಾಮನಬಿಲ್ಲು ಬೆಳಕಿನ ವಿಭಜನೆಯ ನಿಯಮವನ್ನು ಅನುಸರಿಸುತ್ತದೆ. (ವಕ್ರೀಭವನ ನಿಯಮ)

213. ಮರಿಚಿಕೆ, ಬಿಸಿಲ್ಕುದುರೆ, ಇದು ಬೆಳಕಿನ ಸಂಪೂರ್ಣ ಆಂತರಿಕ ಪ್ರತಿಫಲ ನಿಯಮವನ್ನು ಅನುಸರಿಸುತ್ತವೆ.

214. ವಜ್ರ -> ಬೆಳಕಿನ ಸಂಪೂರ್ಣ ಆಂತರಿಕ ಪ್ರತಿಫಲನದಿಂದ ಹೊಳೆಯುತ್ತದೆ.

215. ಹೆಚ್ಚು ಸಾಂದ್ರಮಾದ್ಯಮದಿಂದ ಕಡಿಮೆ ಸಾಂದ್ರಮಾದ್ಯಮಕ್ಕೆ ಬೆಳಕು ಪ್ರಸಾರವಾಗುವಾಗ ಮಾದ್ಯಮವನ್ನು ಪ್ರತ್ಯೇಕಿಸುವ ಮೈನಲ್ಲಿ ಏರ್ಪಡುವ ಪತನ ಕೋನ ಕ್ರಾಂತಿ ಕೋನಕ್ಕಿಂತ ದೊಡ್ಡದಾಗಿದ್ದರೆ ಮಾತ್ರ ಬೆಳಕು ಸಂಪೂರ್ಣ ಆಂತರಿಕ ಪ್ರತಿಫಲನಗೊಳ್ಳುತ್ತದೆ.

216. ಬೆಳಕಿನಲ್ಲಿರುವ 7 ಬಣ್ಣಗಳು, ( ನೇರಳೆ, ಊದು, ನೀಲಿ, ಹಸಿರು, ಹಳದಿ, ಕಿತ್ತಳೆ, ಕೆಂಪು)

V I B G Y O R

217. ಬಾಗುವಿಕೆಯಲ್ಲಿ ಬಣ್ಣಗಳ ಕ್ರಮಾನುಗತ – ಕೆಂಪು, ಕಿತ್ತಳೆ, ಹಳದಿ, ಹಸಿರು, ನೀಲಿ, ಊದು, ನೇರಳೆ

218. ಬಿಳಿ ಬಣ್ಣದಲ್ಲಿ 7 ಬಣ್ಣಗಳು ಅಡಕವಾಗಿರುತ್ತೆ ಎಂಬುದನ್ನು ತೋರಿಸಿಕೊಟ್ಟ ವಿಜ್ಞಾನಿ – ನ್ಯೂಟನ್

219. ವಾಯುಮಂಡಲದ ಹೊರಗೆ ಆಕಾಶ ಕಪ್ಪಾಗಿ ಕಾಣುವುದು. ಬೆಳಕಿನ ಚದುರುವಿಕೆಯಿಂದ ಆಕಾಶ ನೀಲಿಯಾಗಿ ಕಾಣುವುದು.

220. ದಾತುವಿನ ಅತ್ಯಂತ ಚಿಕ್ಕ ಹಾಗು ರಾಸಾಯನಿಕ ಕ್ರಿಯೆಯಲ್ಲಿ ಭಾಗವಹಿಸುವ ಕಣವೇ ಪರಮಾಣು.

221. ಪರಮಾಣು ಸ್ವತಂತ್ರವಾಗಿರುಬಲ್ಲದು. ಅಥವಾ ಗುಂಪಿನಲ್ಲಿಯೂ ಇರಬಹುದು.

222. ಪರಮಾಣುವನ್ನು ವಿಭಜಿಸಬಹುದು.

223. ವಸ್ತುವಿನ ಎಲ್ಲಾ ಮೂಲಗುಣಗಳಿರುವ ಅತ್ಯಂತ ಸ್ವತಂತ್ರ್ಯ ಕಣವೇ ಅಣು

224. ಪರಮಾಣುವಿನ ಗುಚ್ಚ ಅಣುವಾಗಿದ್ದು, ಇದು ಆ ವಸ್ತುವಿನ ಮೂಲಗುಣವನ್ನು ಹೊಂದಿರುತ್ತದೆ.

225. ಪರಮಾಣು ಅಥವಾ ಪರಮಾಣುವಿನ ಗುಚ್ಚವು 'ಎಲೆಕ್ಟ್ರಾನ್‌ಗಳನ್ನು ಕಳೆದುಕೊಳ್ಳುವುದರಿಂದ ಅಥವಾ ಪಡೆಯುವುದರಿಂದ ವಿದ್ಯುತ್ ಅಂಶಯುಕ್ತವಾದಾಗ ಅಯಾನು ಎನಿಸಿಕೊಳ್ಳುತ್ತದೆ.

226. ಪರಮಾಣು ರಾಶಿಯನ್ನು ಕಂಡುಹಿಸಿಯಲು ಹೈಡ್ರೋಜನ್ ರಾಶಿಯನ್ನು ಆದರ್ಶಮಾನವನ್ನಾಗಿಸಲಾಗಿದೆ. ಉದಾ: ಆಕ್ಸಿಜನ್ ಪರಮಾಣು ರಾಶಿ-16 ಅಂದರೆ ಹೈಡ್ರೋಜನ್ ರಾಶಿಯ 16 ಪಟ್ಟು ಎಂದರ್ಥ

$$\text{ಪರಮಾಣು ರಾಶಿ} = \frac{\text{ದಾತುವಿನ ಒಂದು ಪರಮಾಣು ರಾಶಿ}}{\text{ಹೈಡ್ರೋಜನ್ ಒಂದು ಪರಮಾಣು ರಾಶಿ}}$$

227. ಇತ್ತೀಚಿಗೆ ಪರಮಾಣುವಿನ ರಾಶಿಯನ್ನು ಕಂಡುಹಿಡಿಯಲು-> ಕಾರ್ಬನ್ 12 ಅನ್ನು ಉಪಯೋಗಿಸುತ್ತಾರೆ.

228. ಅಣು ರಾಶಿಯನ್ನು ಕಂಡುಹಿಡಿಯಲು ಮೋಲ್ ಮಾನವನ್ನು ಉಪಯೋಗಿಸುತ್ತಾರೆ.

229. ಅವೋಗಾಡ್ರೋ = $6.023 \times 10^{23}$ ಹೈಡ್ರೋಜನ್ ಪರಮಾಣುಗಳೀರುತ್ತವೆ.

230. ಯಾವುದೇ ವಸ್ತುವಿನ ಅಣುರಾಶಿಯನ್ನು 1 ಮೋಲ್ ಎಂದು ಪರಿಗಣಿಸಲಾಗುತ್ತದೆ.

ಉದಾ: ನೀರಿನ ಒಂದು ಮೋಲ್ = 8 ಗ್ರಾಂ, (ಒಂದು ಮೋಲ್ = ವಸ್ತುವಿನ ಒಂದು ಗ್ರಾಂ)

231. ಆಣುರಾಶಿಯ ಒಟ್ಟು ಮೊತ್ತವೇ 'ಅವೋಗಾಡ್ರೋ' 25

232. ಮೂಲವಸ್ತುವು ತನ್ನಲ್ಲಿರುವ ಎಲೆಕ್ಟ್ರಾನ್‌ಗಳನ್ನು ಕಳೆದುಕೊಳ್ಳುವ ಅಥವಾ ಪಡೆದುಕೊಳ್ಳುವ ಸ್ಥಿರ ಸಂಖ್ಯೆ ಸಂಯೋಗ ಸಾಮರ್ಥ್ಯವಾಗಿರುತ್ತದೆ.

233. ಅತ್ಯಂತ ಹಗುರವಾದ ಪರಮಾಣು-ಹೈಡ್ರೋಜನ್, ಅತ್ಯಂತ ಭಾರವಾದ ಪರಮಾಣು-ಯುರೇನಿಯಂ

234. ಹೆಚ್ಚು ಸಂಯುಕ್ತಗಳನ್ನು ಉಂಟುಮಾಡುವ ಮೂಲವಸ್ತು- ಹೈಡ್ರೋಜನ್

235. ರಾಸಾಯನಿಕ ಕ್ರಿಯೆಯಲ್ಲಿ ಭಾಗವಹಿಸಿ ತಮ್ಮ ಇರುವಿಕೆಯನ್ನು ಉಳಿಸಿಕೊಳ್ಳುವ ದಾತುಗಳ ಗುಂಪಿಗೆ ರ್‍ಯಾಡಿಕಲ್ಸ್ ಎನ್ನುವರು.

236. ಒಂದು ದಾತು ಒಂದು ಸಂಯುಕ್ತದೊಂದಿಗೆ ಒಂದು ರೀತಿಯಲ್ಲಿ ಬೇರೊಂದು ಸಂಯುಕ್ತದೊಂದಿಗೆ ಬೇರೊಂದು ರೀತಿಯಲ್ಲಿ ವರ್ತಿಸಿದರೆ ' ಚರಸಂಯೋಗ ಸಾಮರ್ಥ್ಯ' ಎನ್ನುವರು.

237. ಬೇರೆ ಬೇರೆ ಪರಮಾಣುಗಳೊಂದಿಗೆ ಆಗುವ ಎಲೆಕ್ಟ್ರಾನ್‌ಗಳ ಜೋಡಣೆಯ ಬದಲಾವಣೆಯನ್ನು ರಾಸಾಯನ ಕ್ರಿಯೆ ಎನ್ನುವರು.

238. K.L.M.N. ಎಲೆಕ್ಟ್ರಾನ್ ಕವಚಗಳು s.p.d.f. ಇವು ಉಪಕವಚಗಳು

239. ಪರಮಾಣುವಿನ ಯಾವುದೇ ಕವಚದಲ್ಲಿರುಬಹುದಾದ ಎಲೆಕ್ಟ್ರಾನ್‌ಗಳ ಗರಿಷ್ಠ ಸಂಖ್ಯೆ -> $2n^2$

240. ಹೈಡ್ರೋಜನ್ ನ್ಯೂಟ್ರನ್ ಸಂಖ್ಯೆ – ೦

241. ಪೊಟ್ಯಾಷಿಯಂ, ಸೋಡಿಯಂ ಇವು ಮೃದುವಾಗಿದ್ದರೂ ಲೋಹಗಳು

242. ಪಾದರಸ, ಗ್ಯಾಲಿಯಂ ಇವು ದ್ರವ ಲೋಹಗಳು.

243. ಗ್ರಾಫೈಟ್ ಅಲೋಹವಾಗಿದ್ದರೂ ಇದು ಉಷ್ಣ ಮತ್ತು ವಿದ್ಯುತ್ ವಾಹಕಗಳಾಗಿವೆ (ಹೊಳೆಯುವ ಮೃದುವಸ್ತು)

www.vidyachetan.in

244. ಸತು ಲೋಹವಾಗಿದ್ದರೂ ತಂತು ಮತ್ತು ಪತ್ರ ಶೀಲತ್ವ ಹೊಂದಿಲ್ಲ.

245. ಲೋಹಗಳು ಎಲೆಕ್ಟ್ರಾನ್ ಬಿಟ್ಟುಕೊಡುತ್ತವೆ. ಅಲೋಹಗಳು ಸ್ವೀಕರಿಸುವ ಪ್ರವೃತ್ತಿಯುಳ್ಳವು.

246. ಹೈಡ್ರೋಜನ್ ಅಲೋಹಗಳೊಂದಿಗೆ ವರ್ತಿಸಿ ಸಹ ವೇಲೆನ್ಸಿ ಸಂಯುಕ್ತಗಳನ್ನು ಕೊಡುತ್ತವೆ.

$$C + 2H_2 \dashrightarrow CH_4$$

247. ವಜ್ರ ಮತ್ತು ಗ್ರಾಫೈಟ್ ಇವು ಕಾರ್ಬನಿನ ಶುದ್ಧ ರೂಪ.

248. ಮರಗಳಲ್ಲಿ ಕರ್ಬನ್ ಘನ ಸಂಯುಕ್ತವಾಗಿ ಸೆಲ್ಯುಲೋಸ್ ರೂಪದಲ್ಲಿರುತ್ತದೆ.

249. ಸುಣ್ಣದ ಕಲ್ಲು, ಅಮೃತ ಶಿಲೆ, ಕಪ್ಪೆಚಿಪ್ಪು, ಇವು ಕಾರ್ಬನಿನ ಘನ ಸಂಯುಕ್ತ ರೂಪವಾಗಿದೆ.

250. ವಜ್ರ ವಿದ್ಯುತ್ ಅವಾಹಕ, ಉಷ್ಣದ ಅತಿ ದುರ್ಬಲ ವಾಹಕ

251. ವಜ್ರವನ್ನು ೧೦೭೩ K ತಾಪದಲ್ಲಿ ಕಾಯಿಸಿದಾಗ ಉರಿದು ಕಾರ್ಬನ್ ಡೈ ಆಕ್ಸೈಡ್ ಉಂಟಾಗುತ್ತದೆ.

252. ಗಾಜು ಮತ್ತು ವಜ್ರವನ್ನು ಕತ್ತರಿಸಲು ವಜ್ರವನ್ನು ಉಪಯೋಗಿಸುತ್ತಾರೆ.

253. ಇದ್ದಿಲು, ಕಲ್ಲಿದ್ದಿಲು, ಕೋಕ್ ಇವುಗಳು ಕಾರ್ಬನಿನ ಅಸ್ಪಟಿಕ ರೂಪವಾಗಿದೆ.

254. ಪರಮಾಣುವಿನ ಜೋಡಣೆಯ ವ್ಯತ್ಯಾಸವೆ ದಾತುಗಳ ಬಹುರೂಪತೆಗೆ ಕಾರಣ.

255. ಸ್ಪಟಿಕತೆ ಎಂಬುವುದು ಪರಮಾಣುವಿನ ಜೋಡಣೆಯ ವ್ಯತ್ಯಾಸವಾಗಿರುತ್ತದೆ.

256. ಗ್ರಾಫೈಟ್ ವಜ್ರದಂತೆ ಜಡವಸ್ತು, ಗ್ರಾಫೈಟ್ ಅನ್ನು ಲೂಬ್ರಿಕೇಂಟ್‌ಗಳಲ್ಲಿ ಬಳಸುತ್ತಾರೆ.

257. ಬಿಟುಮಿನಸ್ ಕಲ್ಲಿದ್ದಿಲಿನಲ್ಲಿ 78 % ಕಾರ್ಬನ್ ಇರುತ್ತೆ ಇದನ್ನು ಕೋಲ್‌ವಾಟರ್‌ನಲ್ಲಿ ಉಪಯೋಗಿಸುತ್ತಾರೆ.

258. ಅಂತ್ರಾಸೈಟ್ 90 % ಕಾರ್ಬನ್ ಇರುತ್ತೆ. ಇದನ್ನು ಉಗಿಬಂಡಿಯಲ್ಲಿ ಉಪಯೋಗಿಸುತ್ತಾರೆ ಮತ್ತು ಹೊಗೆ ರಹಿತ ಉರುವಲಾಗಿ ಉಪಯೋಗಿಸುತ್ತಾರೆ.

259. ಪೀಟ್ 60 % ಮತ್ತು ಲಿಗ್ನೈಟ್ 70% ಕಾರ್ಬನ್ ಇರುತ್ತದೆ.

260. ಬಿಟುಮಿನಸ್ ಕಲ್ಲಿದ್ದಲನ್ನು 1573 K ತಾಪದಲ್ಲಿ ಕಾಯಿಸಿದಾಗ ಕೋಕ್ ಉತ್ಪತ್ತಿಯಾಗುವುದು.

## ಕ್ಯಾಲ್ಸಿಯಂ ಕಾರ್ಬೈಡ್ $(CaC\ )_2$

$$CaCO_3 \text{ ------> } CAO + C_2\ O_2 \uparrow$$

261. $C_2H_3$ = 'ಆಕ್ಸಿ ಅಸಿಟಲಿನ್ ' ಇದನ್ನು ಲೋಹ ಕತ್ತರಿಸಲು ಮತ್ತು ಲೋಹಗಳ ಬೆಸುಗೆಯಲ್ಲಿ ಉಪಯೋಗಿಸುತ್ತಾರೆ.

262. ಸಿಲಿಕಾನ್ ಕಾಬೈಡ್ Sic (ಕಾರ್ಬೋರೆಂಡಮ್) – ಹಂತ ಉಪಕರಣಗಳಲ್ಲಿ ಉಪಯೋಗಿಸುತ್ತಾರೆ.

263. ಕ್ಯಾಲ್ಸಿಯಂ ಕಾಬೈಡ್ ಶೀಘ್ರವಾಗಿ ನೀರಿನೊಡನೆ ವರ್ತಿಸಿ ಅಸಿಟಲಿನ್ ಅನಿಲವನ್ನು ಬಿಡುಗಡೆ ಮಾಡುತ್ತದೆ.

264. ನಿಸರ್ಗದಲ್ಲಿ ನೇರವಾಗಿ ಸಿಗುವ ಕೆಲವು ಕಾರ್ಬೋನೇಟುಗಳು.

ಮಾಲಟೈಟ್ -> ತಾಮ್ರದ ಕಾರ್ಬೋನ್ಬೆಟ್
ಸಿರುಸೈಟ್ -> ಸೀಸದ ಕಾಬೋನೇಟ್
ಕಾಲಮೈನ್ ->
ಸುಣ್ಣದ ಕಲ್ಲು -> ಕ್ಯಾಲ್ಸಿಯಂ ಕಾರ್ಬೋನೇಟ್

265. ಕಾರ್ಬನಿಕ್ ಆಮ್ಲ + ಕ್ಯಾಲ್ಸಿಯಂ ಹೈಡ್ರಾಕ್ಸೈಡ್ -> ಕ್ಯಾಲ್ಸಿಯಂ ಕಾರ್ಬೋನೇಟ್ + ನೀರು

266. ಕ್ಯಾಲ್ಸಿಯಂ ಆಕ್ಸೈಡ್ + ನೀರು -> ಕ್ಯಾಲ್ಸಿಯಂ ಹೈಡ್ರಾಕ್ಸೈಡ್ + ಶಾಖ

267. ಕ್ಯಾಲ್ಸಿಯಂ ಕಾರ್ಬೋನೆಟ್– ಸುಣ್ಣದ ಕಲ್ಲು, ಕ್ಯಾಲ್ಸಿಯಂ ಆಕ್ಸೈಡ್ – ಸುಟ್ಟ ಸುಣ್ಣ ಕ್ಯಾಲ್ಸಿಯಂ ಹೈಡ್ರಾಕ್ಸೈಡ್ – ಸುಣ್ಣದ ತಿಳಿ ನೀರು.

268. ಸೋಡಿಯಂ ಕಾರ್ಬೋನೇಟ್ ವಾಷಿಂಗ್ ಸೋಡಾ $(Na_2Co_3)$

269. ಸೋಡಿಯಂ ಕಾರ್ಬೋನೇಟ್ ತಯಾರಿಕೆಗೆ ಸೋಡಿಯಂ ಬೈ ಕಾರ್ಬೋನೇಟ್ ಅನ್ನು ಆಮ್ಲ ನಿರೋಧಕವಾಗಿ ಉಪಯೋಗಿಸುತ್ತಾರೆ.

270. ಬೇಕಿಂಗ್ ಪುಡಿ => ಸೋಡಿಯಂ ಬೈ ಕಾರ್ಬೋನೇಟ್ + ಪೊಟ್ಯಾಷಿಯಂ ಹೈಡ್ರೋಜನ್
271. ಮೃದು ಲೋಹ => ಪೊಟ್ಯಾಶ್ + ಸೋಡಿಯಂ
272. ಕಬ್ಬಿಣ ಲೋಹೋದ್ಧರಣದಲ್ಲಿ ಅಪಕರ್ಷಣಕಾರಿಯಾಗಿ ಕೋಕ್ ಅನ್ನು ಬಳಸುತ್ತಾರೆ.
273. ರಬ್ಬರ್ ವಾಲ್ಕನೀಕರಣ -> ಕಾಡಿಗೆ
274. ಸಂಶ್ಲೇಷಿತ ಪೆಟ್ರೋಲಿಯಂ ತಯಾರಿಕೆಯಲ್ಲಿ ಕಲ್ಲಿದ್ದಲು ಬಳಸುತ್ತಾರೆ.
275. ಕ್ಯಾಲ್ಸಿಯಂ ಕಾರ್ಬೋನೇಟ್ ಅನ್ನು ಕಾಯಿಸಿದಾಗ ಕ್ಯಾಲ್ಸಿಯಂ ಆಕ್ಸೈಡ್ ಮತ್ತು ಕಾರ್ಬನ್ ಡೈ ಆಕ್ಸೈಡ್ ದೊರೆಯುತ್ತದೆ.
276. 4‘ C ಗಿಂತ ಕಡಿಮೆ ತಾಪದಲ್ಲಿ ನೀರು ಹಿಗ್ಗುತ್ತದೆ.
277. ನೀರು ಒಂದು ಸಂಯುಕ್ತ ಎಂದು 1981 ರಲ್ಲಿ **ಹೆನ್ರಿ ಕ್ಯಾವೆಂಡಿಶ್** ಸಂಶೋಧಿಸಿದನು.
278. **ಯುಡಿಯೋ ಮೀಟರ್** ಎಂಬ ಉಪಕರಣದ ಸಹಾಯದಿಂದ ನೀರನ್ನು ಪ್ರಯೋಗ ಶಾಲೆಯಲ್ಲಿ ತಯಾರಿಸುತ್ತಾರೆ.
279. ಹೈಡ್ರೋಜನ್ ಮತ್ತು ನೈಟ್ರೋಜನ್ ಸಂಶೋಧಿಸಿದವರು -> **ಹೆನ್ರಿ ಕ್ಯಾವೆಂಡಿಶ್**
280. ಹೈಡ್ರೋಜನ್‌ನನ್ನು ಆಕ್ಸಿಜನ್ ಪರಿಸರದಲ್ಲಿ ಉರಿಸಿದಾಗ **ನೀರು** ಉತ್ಪತ್ತಿಯಾಗುತ್ತದೆ.
281. ಶುದ್ಧ ನೀರು ಒಂದು ತಟಸ್ಥ ದ್ರವ ಇದು ಆಮ್ಲಿಯವೂ ಅಲ್ಲ, ಪ್ರತ್ಯಾಮ್ಲಿಯಾವು ಅಲ್ಲ.
282. ಸೋಡಿಯಂ, ಪೊಟ್ಯಾಸಿಯಂ, ಕ್ಯಾಲ್ಸಿಯಂ ಮತ್ತು ಬೇರಿಯಂ ಇವು ಕ್ರಿಯಾಶೀಲ ದಾತುಗಳು.
283. ಪಾದರಸಯುಕ್ತ ಸೋಡಿಯಂ ಪೊಟ್ಯಾಷಿಯಂ ನೀರಿಗೆ ಹಾಕಿದರೆ ಕ್ರಿಯೆ ಬಿರುಸು ಕಡಿಮೆಯಾಗಿ ಹೈಡ್ರೋಜನ್ ಸಂಗ್ರಹಿಸಬಹುದು.
284. ಏಸ್ಟರ್‌ಗಳನ್ನು ಆಹಾರಕ್ಕೆ ಕೃತಕ ಅಪೇಕ್ಷಿತ ವಾಸನೆ ಕೊಡಲು ಉಪಯೋಗಿಸುತ್ತಾರೆ. ಇದು ಆಮ್ಲ ಮತ್ತು ಆಲ್ಕೋಹಾಲ್‌ನಲ್ಲಿ ನೀರು ನಷ್ಟವಾದಾಗ ದೊರೆಯುತ್ತದೆ.
285. ಸಂಪೂರ್ಣ ಶುದ್ಧ ನೀರು ಕುಡಿಯಲು ಯೋಗ್ಯವಲ್ಲ, ಕಾರಣ ಇದು ಸಪ್ಪೆಯಾಗಿರುತ್ತದೆ.
286. ನಿರ್ದಿಷ್ಟ ಪ್ರಮಾಣದಲ್ಲಿ ದ್ರವಣಗಳು ಮತ್ತು ಅನೀಲಗಳು ಕರಗಿರುವ ನೀರು ಕುಡಿಯಲು ಉಪಯುಕ್ತವಾದ ನೀರು ಆಗಿರುತ್ತದೆ.
287. ಕಾಯಿಸಿದ ನೀರು ರುಚಿಯಾಗಿರುವುದಿಲ್ಲ. ಕಾರಣ ಅದರಲ್ಲಿ ಆಕ್ಸಿಜನ್ ಇರುವುದಿಲ್ಲ.
288. ಗುಣಮಟ್ಟದ ನೀರು ಅಳೆಯುವ ಮಾನ -> WHO & ISI
289. ಕ್ಯಾಲ್ಸಿಯಂ ಮತ್ತು ಮೆಗ್ನೀಷಿಯಂ ಲವಣಗಳು ನೀರಿನ ಗಡಸುತನಕ್ಕೆ ಕಾರಣವಾಗಿವೆ.
290. ಸೋಡಿಯಂ ನೀರಿನ ಗಡಸುತನವನ್ನು ಹೋಗಲಾಡಿಸುತ್ತೆ.
291. ಕಾರ್ಬನ್ ಡೈ ಆಕ್ಸೈಡ್, ಗಂಧಕದ ಡೈ ಆಕ್ಸೈಡ್ ಆಮ್ಲ ಮಳೆಗೆ ಕಾರಣವಾಗಿದೆ.

೨೯೨. ಶೇಕಡಾವಾರು ಪ್ರಮಾಣದಲ್ಲಿ ಗಾಳಿಗಿಂತ ನೀರಿನಲ್ಲಿ ಹೆಚ್ಚು ಆಮ್ಲಜನಕ ವಿಲೀನವಾಗಿರುತ್ತೆ.

೨೯೩. ಅಸವಿತ ನೀರು ಶುದ್ಧ ನೀರಲ್ಲ. ಕಾರಣ ಅದರಲ್ಲಿಯೂ ಕೊಂಚ ವಾಯು ವಿಲೀನವಾಗಿರುತ್ತೆ.

294. Co & $H_2$ ೧:೨ ಪ್ರಮಾಣ = ಜಲಾನೀಲ

295. ಸಂಯುಕ್ತಗಳೊಂದಿಗೆ ಮತ್ತು ಕಾರ್ಬಾನಿಕ್ ಎಸ್ಟರುಗಳೊಂದಿಗೆ ನೀರು ಕ್ರಿಯೆ ನಡೆಸುವಾಗ ತನ್ನಲ್ಲಿರುವ OH ಪರಮಾಣು ಪುಂಜವನ್ನು ನೀಡಿ ಬೇರೊಂದು ಪರಮಾಣು ಪುಂಜವನ್ನು ಪಡೆಯುವುದನ್ನು 'ಜಲವಿಭಜನೆ' ಎನ್ನುವರು.

೨೯೬. ಕ್ಯಾಲ್ಸಿಯಂ ಮತ್ತು ಮೆಗ್ನೀಷಿಯಂ ಸಲ್ಫೇಟ್‌ಗಳು ನೀರಿಗೆ ಶಾಶ್ವತ ಗಡಸುತನವನ್ನು ನೀಡುತ್ತವೆ.

೨೯೭. ಟಿ.ಎಂ.ಸಿ --> ಥೌಸಂಡ್ ಮಿಲಿಯನ್ ಕ್ಯೂಬಿಕ್ ಫೀಟ್ (ಸಾವಿರ ಮಿಲಿಯ ಘನ ಅಡಿ ಎಂದರ್ಥ)

೨೯೮. ಕ್ಯೂಸೆಕ್ಸ್ --> ಕ್ಯೂಬಿಕ್ ಫೀಟ್/ಸೆಕೆಂಡ್. ಇದು ನೀರು ಹರಿಯುವ ಪರಿಮಾಣದ ದರ ಸೂಚಿಸುವ ಮಾನ.

299. ಡ್ಯೂಟೇರಿಯಂ ಎಂಬುದು ಹೈಡ್ರೋಜನ್ ಸಮಸ್ಥನಿ (ಐಸೋಟೋಪು) – ಡಿ.

300. ಡ್ಯೂಟೇರಿಯಂ ಆಕ್ಸೈಡ್ ($D_2O$) ಇದು ಭಾರಜಲ.

301. ($D_2O$) --> ಇದನ್ನು ಬೈಜಿಕ ಕ್ರಿಯಾಕಾರಿಗಳಲ್ಲಿ ಮಂದಕವಾಗಿ ಉಪಯೋಗಿಸುತ್ತಾರೆ.

೩೦೨. ಸಂಪೂರ್ಣ ಶುದ್ಧ ನೀರು ಹೆಚ್ಚಿನ ಗಾತ್ರದಲ್ಲಿ ನಸು ನೀಲಿ ಬಣ್ಣದಲ್ಲಿರುತ್ತೆ. ಇದಕ್ಕೆ ಕಾರಣ ನೀರಿನಲ್ಲಿರುವ ಆಕ್ಸಿಜನ್.

## ಜೀವ ಶಾಸ್ತ್ರ ೮ನೇ ತರಗತಿ

1. ಚಲನೆಯ ಅಂಗಗಳು: ಅಮೀಬಾ- ಮಿಥ್ಯಪಾದ, ಯೂಗ್ಲೀನಾ – ಲೋಮಾಂಗ(ಸಿಲಿಯಾ), ಪ್ಯಾರಾಮೀಸಿಯಂ- ಕಶಾಂಗ, ಹೈಡ್ರಾ – ಕರಬಳ್ಳಿ, ಕ್ಲಾಮಿಡೋಮಾನಸ್ – ಕಶಾಂಗದ ಮೂಲಕ

೨. ಸ್ಪಂಜು, ಹವಳ, ಸಮುದ್ರದ ಅನಿಮೋ ಇವುಗಳು ಚಲಿಸುವುದಿಲ್ಲ.

೩. ಕ್ಲಾಮಿಡೋ ಮಾನಸ್, ವಾಲ್ವಾಕ್ಸ್, ಇವು ತಮ್ಮ ದೇಹದಿಂದ ಚಲಿಸುತ್ತವೆ.

೪. ಆಹಾರ + ಆಕ್ಸಿಜನ್ --> ಶಕ್ತಿ

೫. ಅತಿ ಹೆಚ್ಚು ಅವಧಿ ಜೀವಿಸುವ ಮರ - ಬ್ರೆಜಿಲ್ ಕೋನ್ ಪೈನ್ (೪೦೦೦-೪೫೦೦ ವರ್ಷ)

6. ಜೀವಶಾಸ್ತ್ರದ ಪಿತಾಮಹಾ – ಅರಿಸ್ಟಾಟಲ್

7. ವರ್ಗೀಕರಣದ ಪಿತಾಮಹಾ – ಕರಲೋಸ್ ಅನೀಯಸ್

8. ಆಯೂರ್ವೇದ ಪಿತಾಮಹಾ – ಚರಕ

9. ಜೀವಿಗಳ ವರ್ಗೀಕರಣದ ಮಜಲುಗಳು --> ಪ್ರಭೇದ – ಜಾತಿ – ಕುಟುಂಬ – ಗಣ – ವರ್ಗ – ವಂಶ – ಸಾಮ್ರಾಜ್ಯ.

10. ಜೀವಿಗಳ ಸಾಮ್ರಾಜ್ಯದ ವಿಧಗಳು 5 ಅವುಗಳು

1. ಮೊನೆರಾ – ಬ್ಯಾಕ್ಟೀರಿಯಾ, ನೀಲ ಹಸಿರು ಶೈವಲ್ಯ
2. ಪ್ರೊಟಿಸ್ಟ – ಅಮೀಬಾ, ಪ್ಯಾರಮೀಸಿಯಂ, ಎಂಟಮಿಬಾ, ಪ್ಲಾಸ್ಮೋಡಿಯಂ, ಶೈವಲ
3. ಸಸ್ಯ, 4. ಪ್ರಾಣಿ, ಮತ್ತು
5. ಶಿಲಿಂದ್ರ

11. ವೈರಸ್ ಸಾಮಾನ್ಯ ವರ್ಗೀಕರಣದಲ್ಲಿ ಇಲ್ಲ. ಕಾರಣ ಇದಕ್ಕೆ ಜೀವಕೋಶವಿಲ್ಲ. ಇದು ಜೀವ ಮತ್ತು ನಿರ್ಜೀವಗಳ ನಡುವಿನ ಕೊಂಡಿ.

12. ಪ್ರೊಕ್ಯಾರಿಯೋಟ್‌ಗಳು ಎಂದರೆ ಕೋಶಪೊರೆ, ಮೈಟೊಕಾಂಡ್ರಿಯ ಇಲ್ಲದೆ ಇರುವಂತಹ ಜೀವಿಗಳು.

13. ಯೂಕ್ಯಾರಿಯೋಟ್ ಎಂದರೆ ಕೋಶಪೊರೆ, ಮೈಟೊಕಾಂಡ್ರಿಯ ಇರುವಂತಹ ಜೀವಿಗಳು

14. ಅಸಿಟಬ್ಲೊರಿಯ– ಇದು ನೀಲಿ ಹಸಿರು ಆಲ್ಗೆ ಮತ್ತು ನಾಸ್ಟಾಕ್‌ಗೆ ಉದಾಹರಣೆಯಾಗಿದೆ.

15. ಏಕಕೋಶೀಯ ಶೈವಲ – ಕ್ಲಾಮಿಡೋಮಾನಸ್ ಡಯಾಟಂಗಳು

ಬಹುಕೋಶೀಯ ಶೈವಲ – ಪಾಂಡೋರೈನ, ವಾಲ್ವಾಕ್ಸ್

ಎಳೆಯಾಕಾರದ ಶೈವಲ – ಸ್ಪೈರೋಗೈರ ಮತ್ತು ಯುಲೋಥ್ರಿಕ್ಸ್

16. ಶೀಲಿಂಧ್ರಗಳಲ್ಲಿ ಏಕಕೋಶೀಯ ಶೈವಲ – ಯಿಸ್ಟ್ , ಬಹುಕೋಶೀಯ ಶೈವಲ – ನಾಯಿಕೊಡೆ

17. ಸಸ್ಯ ವೈರಸ್ – ಟಿ.ಎಂ.ವಿ. (ಟೋಬಾಕೊ ಮೋಸಾಯಿಕ್ ವೈರಸ್) ಪ್ರಾಣಿ ವೈರಸ್ – ಹೆಚ್.ಐ.ವಿ

18. ವೈರಸ್ ನ್ಯೂಕ್ಲಿಕ್ ಆಮ್ಲ ಮತ್ತು ಪ್ರೊಟೀನ್ ಕವಚದಿಂದ ನಿರ್ಮಿತವಾಗಿದೆ.

19. ಜೀವಕೋಶವನ್ನು ಕಂಡುಹಿಡಿದವರು – ರಾಬರ್ಟ್ ಹುಕ್

20. ಸೂಕ್ಷ್ಮದರ್ಶಕವನ್ನು ಕಂಡುಹಿಡಿದವರು – ಲೆವನ್ ಹಾಕ್

21. ಜೀವಕೋಶಕ್ಕೆ Cell ಎಂದು ನಾಮಕರಣ ಮಾಡಿದವರು – ರಾಬರ್ಟ್ ಹುಕ್

22. ಕೋಶಪೊರೆ ಇದು ಜೀವಕೋಶದ ಹೊರ ಕವಚ

23. ಕೋಶಪೊರೆ 2 ರೀತಿಯ ಚಲನೆಗೆ ಅವಕಾಶ ಮಾಡಿಕೊಡುತ್ತದೆ. 1. ವಿಸರಣೆ 2. ಅಭಿಸರಣೆ

24. ಕಣದಂಗಗಳು ಹೋಶದ್ರವ್ಯದಲ್ಲಿ ಕಂಡುಬರುತ್ತದೆ.

25. ಪ್ರೋಟೀನ್ ಕಣಗಳು ಎಂಡೋಪ್ಲಾಸ್ಟಿಕ್ ರೆಟಿಕ್ಯುಲಂ ಕಣದಂಗದ ಮೇಲ್ಭಾಗದಲ್ಲಿ ಅಂಟಿಕೊಂಡಿರುತ್ತದೆ ಮತ್ತು ಸ್ವತಂತ್ರವಾಗಿ ಚಲಿಸುತ್ತವೆ.

26. ರೈಬೋಜೋಮ್ ಮತ್ತು ಸೆಂಟ್ರಿಯೋಲ್ ಇವು ಪೊರೆರಹಿತ ಕಣದಂಗಗಳು.

27. ದ್ಯುತಿಸಂಶ್ಲೇಷಣಾ ಕ್ರಿಯೆಯು **ಕ್ಲೋರೋಪ್ಲಾಸ್ಟ್** ನಲ್ಲಿ ನಡೆಯುತ್ತದೆ.

28. ಪೊರೆ ಹಿಂಬದಿಗೆ ಮಡಚಿಕೊಳ್ಳುವುದರಿಂದ ಗ್ರಾನ ನಿರ್ಮಾಣವಾಗುತ್ತೆ. ಗ್ರಾನದ ಮೇಲೆ ಕ್ಲೋರೊಫಿಲ್ ಅಣುಗಳು ರಚನೆಗೊಳ್ಳುತ್ತವೆ.

29. ಗ್ರಾನಗಳ ನಡುವಿನ ಸ್ಥಳ ಸ್ಟ್ರೋಮವಾಗಿರುತ್ತೆ.

30. ಮೈಟೊಕ್ರಾಂಡ್ರಿಯಾದ ಒಳಪೊರೆಯಲ್ಲಿ ಬೆರಳನಾಕಾರದ ರಚನೆಯ ಅಂಗವನ್ನು ಕ್ರಿಸ್ಟ ಎನ್ನುವರು.

31. ಜೀವಕೋಶದ ಶಕ್ತಿಕೇಂದ್ರ ಮತ್ತು ಉಸಿರಾಟದ ಕೇಂದ್ರ 'ಮೈಟೋಕಾಂಡ್ರಿಯ'

32. ಮೈಟೊಕಾಂಡ್ರಿಯ ದಲ್ಲಿ ಶಕ್ತಿ ATP (ಅಡಿನೋಸಿನ್ ಟ್ರೈ ಫಾಸ್ಫೇಟ್) ರೂಪದಲ್ಲಿ ಸಂಗ್ರಹವಾಗುತ್ತದೆ.

33. ಜೀವಕೋಶದ ಸಂಗ್ರಹ ಸ್ಥಳ – ರಸದಾಂಗಗಳು

34. ಜೀವಕೋಶದಲ್ಲಿ ರಾಸಾಯನಿಕ ವಸ್ತುಗಳನ್ನು ಜೀರ್ಣಿಸಿಕೊಳ್ಳಲು ಸಹಾಯ ಮಾಡುವ ಕಣದಂಗ 'ಲೈಸೋಜೋಮ್'

35. ಜೀವಕೋಶದ ಅತ್ಮಹತ್ಯೆ ಸಂಚಿ – ಲೈಸೋಜೋಮ್

36. ಕೋಶವಿಭಜನೆಯ ಸಂದರ್ಭದಲ್ಲಿ ಕದರಿನ ಎಳೆಗಳನ್ನು ಉತ್ಪತ್ತಿ ಮಾಡುವ ಕಣದಂಗ – ಸೆಂಟ್ರಿಯೋಲ್

37. ಜೀವಕೋಶ ವಿಸರ್ಜಿಸುವ ನಿರ್ಜೀವ ವಸ್ತುಗಳು – ಕ್ಯಾಲ್ಸಿಯಂ ಕಾರ್ಬೋನೇಟ್, ಕ್ಯಾಲ್ಸಿಯಂ ಆಕ್ಸಲೇಟ್

38. ಕೋಶಕೇಂದ್ರದ ದ್ರವ್ಯದಲ್ಲಿ ಎಳೆಯಂತಹ ರಚನೆಯನ್ನು **ಕ್ರೊಮಾಟಿನ್** ಎನ್ನುವರು.

39. ಕ್ರೊಮ್ಯಾಟಿನ್ ವಿಭಜನೆಯ ಸಂದರ್ಭದಲ್ಲಿ ಸಾಂದ್ರಗೊಂಡು ಕ್ರೋಮೋಜೋಮುಗಳು ಮಾರ್ಪಡುತ್ತವೆ.

40. ಕ್ರೋಮೊಸೋಮು, ನ್ಯೂಕ್ಲಿಕ್ ಆಮ್ಲ ಪ್ರೋಟಿನ್‌ನಿಂದ ರಚನೆಯಾಗಿದೆ.

41. ಮಾನವ ಜೀವಕೋಶದಲ್ಲಿ 46 ವರ್ಣತಂತುಗಳು ಇರುತ್ತವೆ.

42. ಜೀನ್‌ಗಳು ವರ್ಣತಂತುವಿನಲ್ಲಿ ಕಂಡುಬರುತ್ತವೆ. ಇದು DNA ದ ವಿಶಿಷ್ಟ ಭಾಗವಾಗಿದೆ.

43. ಕೋಶಕೇಂದ್ರವು ಜೀವಕೋಶದ ಎಲ್ಲಾ ಚಟುವಟಿಕೆಯನ್ನು ನಿಯಂತ್ರಿಸುತ್ತದೆ.

44. ಕಿರುಕೋಶಕೇಂದ್ರ ಅಥವಾ ನ್ಯೂಕ್ಲಿಯೋಲಸ್, ಇದು ನ್ಯೂಕ್ಲಿಯಸ್‌ನಲ್ಲಿ ಕಂಡುಬರುತ್ತದೆ. ಇದು RNA ಯಿಂದ ಕೂಡಿದೆ. ಇದು ಪ್ರೋಟಿನ್ ಸಂಶ್ಲೇಷನೆಯಲ್ಲಿ ಮುಖ್ಯ ಪಾತ್ರವಹಿಸುತ್ತದೆ.

45. DNA ನ್ಯೂಕ್ಲಿಯಸ್‌ನಲ್ಲಿ ಕಂಡುಬಂದರೆ, RNA ನ್ಯೂಕ್ಲಿಯೋಲಸ್‌ನಲ್ಲಿ ಕಂಡುಬರುತ್ತದೆ.

46. ಕೋಶಭಿತ್ತಿ ಇದು ಸಸ್ಯ ಜೀವಕೋಶದ ಕೋಶಪೊರೆಯ ಹೊರಭಾಗದಲ್ಲಿ ಕಂಡುಬರುತ್ತದೆ.

47. ಶೈವಲ – ಇದು ಸೂಕ್ಷ್ಮಾಣು ಜೀವಿಯ ಒಂದು ವರ್ಗವಾಗಿದೆ.

48. ಸೂಕ್ಷ್ಮಾಣು ಜೀವಿಗಳನ್ನು 5 ಭಾಗಗಳಾಗಿ ವಿಂಗಡಿಸುತ್ತಾರೆ. ಅವುಗಳೆಂದರೆ : ವೈರಸ್, ಶಿಲಿಂದ್ರ, ಬ್ಯಾಕ್ಟೀರಿಯಾ, ಪ್ರೋಟೋಜೋವಾಗಳು, ಶೈವಲ

49. ಕಾಲರಾ, ಸಿಡುಬು, ಹುಚ್ಚುನಾಯಿ ಕಡಿತಕ್ಕೆ ಲಸಿಕೆಯನ್ನು ಕಂಡುಹಿಡಿದವರು- ಲ್ಯೂಯಿ ಪಾಶ್ಚರ್(ಫ್ರಾನ್ಸ್)

50. ಮಾನವ ದೇಹದಲ್ಲಿ ಉಂಟಾಗುವ ಅನೇಕ ರೋಗಗಳಿಗೆ ಸೂಕ್ಷ್ಮಾಣು ಜೀವಿಗಳ ಬೆಳವಣಿಗೆಯೇ ಕಾರಣ ಎಂಬುದನ್ನು ತೋರಿಸಿಕೊಟ್ಟ ಮೊದಲ ವಿಜ್ಞಾನಿ – ಲ್ಯೂಯಿ ಪಾಶ್ಚರ್

51. ಬ್ಯಾಕ್ಟೀರಿಯಗಳ ಅಧ್ಯಯನಕ್ಕೆ ವಿಶಿಷ್ಟ ಮಾರ್ಗಗಳನ್ನು ತೋರಿಸಿಕೊಟ್ಟ ವಿಜ್ಞಾನಿ – ರಾರ್ಬರ್ಟ್ ಕೋಚ್ www.vidyachetan.in

52. ಕ್ಷಯ, ಆಂಥ್ರಾಕ್ಸ್ ರೋಗಕ್ಕೆ ಬ್ಯಾಕ್ಟೀರಿಯಗಳು ಕಾರಣ ಎಂದು ತೋರಿಸಿಕೊಟ್ಟ ವಿಜ್ಞಾನಿ- ರಾರ್ಬರ್ಟ್ ಕೋಚ್

53. ಬ್ಯಾಕ್ಟೀರಿಯಕ್ಕೆ 2 ಹೊದಿಕೆ ಇದ್ದು, ರೋಗಕಾರಿ ಬ್ಯಾಕ್ಟೀರಿಯಾಕ್ಕೆ 3 ಹೊದಿಕೆ ಇದೆ. 3ನೇ ಹೊದಿಕೆಗೆ ಕ್ಯಾಪ್ಸೂಲ್ ಎಂದು ಹೆಸರು.

54. ಬ್ಯಾಕ್ಟೀರಿಯಾದ ಅತ್ಯಂತ ಹೊರಗಿನ ಭಾಗ – ಕೋಶಭಿತ್ತಿ

55. ಜೈವಿಕ ಲಕ್ಷಣಗಳನ್ನು ವಂಶಪರಂಪರವಾಗಿ ಸಾಗಿಸುವ ವಸ್ತು – ಡಿಎನ್ಎ

56. ಬ್ಯಾಕ್ಟೀರಿಯಾಗಳ ಉಪಯೋಗ: ಟೀ ಎಲೆಯನ್ನು ಹದಗೊಳಸಲು, ಮಿನಿಗಾರ್ ಉತ್ಪಾದಿಸಲು, ಚರ್ಮ ಹದಗೊಳಸಲು, ಜೀವ ಉತ್ಪಾದಿಸುವುದಕ್ಕೆ.

57. ಬ್ಯಾಕ್ಟೀರಿಯಗಳಿಂದ ಬರುವ ರೋಗಗಳು – ನ್ಯೂಮೋನಿಯಾ, ವಿಷಮಶೀತಜ್ವರ, ಕಾಲರಾ, ಡಿಫ್ತೀರಿಯಾ/ ಕ್ಷಯ

58. ಪ್ರೋಟೋಜೋವಾಗಳಿಂದ ಬರುವ ರೋಗಗಳು.
ಎಂಟಾಮಿಬಾ – ಅಮೀಬಿಕ್ ಆಮಶಂಕೆ
ಟ್ರೈಪನೋಸೋಮ – ನಿದ್ರಾರೋಗ
ಜಿಯೋರ್ಡಿಯ – ಜಿಯಾರ್ಡಿಯಾಸಿಸ್

59. ಬ್ರೆಡ್ ಮತ್ತು ಕೇಕ್ ಉತ್ಪಾದನೆಯಲ್ಲಿ ಯೀಸ್ಟ್ ಉಪಯೋಗಿಸುತ್ತಾರೆ.

60. ಶಿಲೀಂಧ್ರ ದಿಂದ ಅಥ್ಲೇಟ್ಸ್ ಫುಟ್ ರೋಗ ಬರುತ್ತದೆ.

61. ಒಂದೇ ಒಂದು ಸರಳ ಶರ್ಕರದ ಅಣುವನ್ನು ಹೊಂದಿರುವ ಶರ್ಕರಗಳನ್ನು ಮಾನೋಸ್ಯಾಕರೈಡ್ ಗಳು ಎನ್ನುವರು

62. ಕಾರ್ಬೋಹೈಡ್ರೆಟುಗಳಲ್ಲಿ 3 ವಿಧಗಳು :- ಶರ್ಕರ, ಪಿಷ್ಟ, ಸೆಲ್ಯುಲೋಸ್.

63. ಶರ್ಕರ ಮತ್ತು ಪಿಷ್ಟವನ್ನು ಹೆಚ್ಚಿನ ಪ್ರಮಾಣದ ಶಕ್ತಿಯನ್ನು ಉತ್ಪಾದಿಸುತ್ತೆ. ಸೆಲ್ಯುಲೋಸ್ ಇದು ನಾರು ಪದಾರ್ಥ.

64. ಕಾರ್ಬೋಹೈಡ್ರೇಟುಗಳು ಆರ್ಗಾನಿಕ್ ಸಂಯುಕ್ತಗಳಾಗಿವೆ (ಸಾವಯವ)

65. ಮಾನೋಸ್ಯಾಕರೈಡುಗಳು ಮತ್ತು ಓಲಗೋಸ್ಯಾಕರೈಡುಗಳು ಶರ್ಕರದ 2 ವಿಧಗಳಾಗಿವೆ.

66. ಮಾನೋ ಸ್ಯಾಕರೈಡುಗಳು ಸಿಹಿರುಚಿಯನ್ನು ಹೊಂದಿರುತ್ತದೆ. ಗ್ಲುಕೋಸ್, ಫ್ರಕ್ಟೋಸ್, ಗ್ಯಾಲಕ್ಟೋಸ್, ಇವೆಲ್ಲವೂ ಮಾನೋಸ್ಯಾಕರೈಡ್‌ಗಳಾಗಿವೆ. – $C_6H_{12}O_6$

67. ಓಲಿಗೋಸ್ಯಾಕರೈಡುಗಳು ಸಂಕೀರ್ಣ ಶರ್ಕರಗಳಾಗಿವೆ

ಸುಕ್ರೋಸ್ ( ಗ್ಲೂಕೋಸ್ + ಫ್ರಕ್ಟೋಸ್)

ಲ್ಯಾಕ್ಟೋಸ್ ( ಗ್ಲೂಕೋಸ್ + ಗ್ಯಾಲಕ್ಟೋಸ್)

ಮಾಲ್ಟೋಸ್ ( ಗ್ಲೂಕೋಸ್ + ಗ್ಲೂಕೋಸ್)

68. ಶರ್ಕರ ನೀರಿನಲ್ಲಿ ಕರಗುತ್ತದೆ. ಪಿಷ್ಟ ನೀರಿನಲ್ಲಿ ಕರಗುವುದಿಲ್ಲ.

69. ಶರ್ಕರ ರುಚಿಯಾಗಿರುತ್ತದೆ. ಪಿಷ್ಟ ರುಚಿಯಾಗಿರುವುದಿಲ್ಲ.

70. ಗ್ಲೂಕೋಸ್ ಕೊಬ್ಬಿನ ರೂಪಕ್ಕೆ ಪರಿವರ್ತನೆಗೊಳ್ಳುತ್ತದೆ. ಪಿಷ್ಟ, ಕೊಬ್ಬು, ಪ್ರೋಟೀನ್ ಇವುಗಳು ನೀರಿನಲ್ಲಿ ಕರಗುವುದಿಲ್ಲ.

71. ಕಾರ್ಬೋಹೈಡ್ರೇಟ್ ಸಂಯುಕ್ತಗಳು ಅತಿ ಹೆಚ್ಚಿನ ಪ್ರಮಾಣದಲ್ಲಿ ಕೊಬ್ಬಿನಲ್ಲಿರುತ್ತೆ. ಆದ್ದರಿಂದ ಅತಿ ಹೆಚ್ಚಿನ ಪ್ರಮಾಣದಲ್ಲಿ ಕಾರ್ಬೋಹೈಡ್ರೇಟ್‌ಗಿಂತ ಅತಿ ಹೆಚ್ಚಿನ ಪ್ರಮಾಣದಲ್ಲಿ ಶಕ್ತಿ ಉತ್ಪತ್ತಿ ಮಾಡುತ್ತದೆ.

72. ಕೊಬ್ಬು –ಆಲ್ಕೋಹಾಲ್, ಬೆನ್‌ಜಿನ್ ಮತ್ತು ಈಥರ್‌ಗಳಲ್ಲಿ ಕರಗುತ್ತದೆ.

73. ಮೇದೋಜೀರಕಾಂಗ ಗ್ರಂಥಿಯಲ್ಲಿಯ ಲೀಪೇಸ್ ಕಣ್ವದಿಂದ ಗ್ಲಿಸರಾಲ್‌ಗಳಾಗಿ ವಿಭಜನೆಹೊಂದುತ್ತದೆ.

74. ಕೊಬ್ಬಿನಲ್ಲಿ 2ವಿಧ :- 1. ಪ್ರಯೋಜ್ಞ 2. ಅಪಯೋಜ್ಞ

75. ಸಾಮಾನ್ಯ ತಾಪದಲ್ಲಿ ಪದಾರ್ಥಗಳು ಘನಸ್ಥಿತಿಯಲ್ಲಿದ್ದರೆ ಅದನ್ನು ಪರ್ಯಾಪ್ತ ಕೊಬ್ಬಿನ ಆಮ್ಲಗಳು ಎನ್ನುವರು .

76. ಕೊಠಡಿಯ ಸಾಮಾನ್ಯ ತಾಪದಲ್ಲಿ ಪದಾರ್ಥಗಳು ದ್ರವ ಸ್ಥಿತಿಯಲ್ಲಿದ್ದರೆ ಅವುಗಳನ್ನು ಅಪರ್ಯಾಪ್ತ ಕೊಬ್ಬಿನ ಆಮ್ಲಗಳು ಎನ್ನುವರು.

77. ಪ್ರೋಟೀನ್‌ಗಳು ಅಮೀನೋ ಆಮ್ಲಗಳೆಂಬ ನೈಟ್ರೋಜನ್ ಸಂಯುಕ್ತಗಳಿಂದ ಕೂಡಿದೆ.

78. ಪ್ರೋಟಿನುಗಳು ಸಣ್ಣ ಕರುಳಿನಲ್ಲಿರುವ ಪೆಪ್ಟಿಡೇಸ್ ಎಂಬ ಕಣ್ವದಿಂದ ಅಮೀನೋ ಅಮ್ಲಗಳೆಂಬ ವಿಭಜಿಸುತ್ತವೆ.

79. ಇನ್ಸುಲೀನ್ ಗ್ಲೂಕಾಗಾನ್ ಹೀಮೋಗ್ಲೋಬಿನ್ ಆಂಟಿಬಾಡಿಗಳು, ಡಿಎನ್‌ಎ, ಆರ್‌ಎನ್‌ಎ, ನ್ಯೂಕ್ಲಿಕ್ ಆಸಿಡ್ ಇವುಗಳು ಪ್ರೋಟಿನುಗಳಿಗೆ ಉದಾಹರಣೆಗಳಾಗಿವೆ.

80. ಸರಳ ಪ್ರೋಟಿನುಗಳು ಅಮೀನೋ ಆಮ್ಲಗಳೆಂಬ ಅಣುಗಳಿಂದ ಮಾತ್ರ ಮಾಡಲ್ಪಟ್ಟಿದೆ. ಉದಾ: ಮೊಟ್ಟೆಯ ಅಲ್ಬೂಮಿನ್ ಬೀಜಗಳಲ್ಲಿನ ಗ್ಲಾಬ್ಯುಲೀನ್.

81. ಯುಗ್ಮ ಪ್ರೋಟೀನ್‌ಗಳು ಅಮೀನೋ ಆಮ್ಲಗಳಲ್ಲದೆ ಇತರ ಅಣುಗಳಿಂದ ಮಾಡಲ್ಪಟ್ಟಿದೆ. ಉದಾ: ಲೀಪೊ ಪ್ರೋಟೀನ್,

82. ಅಮೀನೊ ಆಮ್ಲದ ಅಣುಸೂತ್ರ --> $NH_2$

83. ಕಾರ್ಬೋಹೈಡ್ರೈಟುಗಳನ್ನು **ಅಯೋಡಿನ್‌ನಿಂದ** ಪರೀಕ್ಷಿಸುವರು.

84. ಶರ್ಕರವನ್ನು ಬೆನಡಿಕ್ ದ್ರಾವಣದಿಂದ ಪರೀಕ್ಷಿಸುವರು.

85. ತಾಮ್ರದ ಸಲ್ಫೇಟ್, ಸೋಡಿಯಂ ಸಿಟ್ರೇಟ್, ಸೋಡಿಯಂ ಕಾರ್ಬೋನೇಟುಗಳ ಮಿಶ್ರಣವೇ 'ಬೆನೆಡಿಕ್ಟ್' ದ್ರಾವಣ.

86. ಸೂಕ್ಷ್ಮಾಣು ಜೀವಿಯ ವಿಘಟನೆಯಿಂದ ಪಡೆಯುವ ಗೊಬ್ಬರ ಸಾವಯವ ಗೊಬ್ಬರ.

87. ವ್ಯವಸಾಯದ ತ್ಯಾಜ್ಯ ವಸ್ತುಗಳಿಂದ ಪಡೆಯುವ ಗೊಬ್ಬರ – ಕಾಂಪೋಸ್ಟ್ ಗೊಬ್ಬರ.

88. ಮಣ್ಣಿನ ಸೂಕ್ಷ್ಮಾಣು ಜೀವಿಗಳು ಗೊಬ್ಬರವಾಗಿ ಪರಿಣಮಿಸುತ್ತವೆ. ಇದನ್ನು ಜೈವಿಕ ಫಲವತ್ತತೆ ಎನ್ನುವರು. ಉದಾ: ನಾಸ್ಟಾಕ್, ಅಜೋಲಾ, ಅನಾಬೀನಾ, ರೈಜೋಬಿಯಂ.

89. ಮಣ್ಣಿನ ಪಿ.ಹೆಚ್ ಮೌಲ್ಯ – 6.5 ರಿಂದ 7.5 ವರೆಗೆ

90. ಸೂರ್ಯಕಾಂತಿಯನ್ನು ದಿಣ್ಣೆ ಮತ್ತು ತಗ್ಗು ವಿಧಾನದಿಂದ ಬೆಳೆಯುವರು.

91. ಜೈವಿಕ ವಿಧಾನದಲ್ಲಿ ಕೀಟಗಳಿಂದ ಪಾಪಾಸ್ಸುಕಳ್ಳಿ ಕಳೆಯನ್ನು ನಿಯಂತ್ರಿಸುತ್ತಾರೆ.

92. ಯುಪಟೋರಿಯಂ, ಲಾಂಟಾನಾ, ಪಾರ್ಥೇನಿಯಂ, ಹುಲ್ಲು, ಇವು ಕಳೆಗಳಾಗಿವೆ.

93. ಡಿ.ಡಿ.ಟಿ, ಮೆಲಥಿಯಾನ್, ಬಿಹೆಚ್‌ಸಿ ಅಥವಾ ಗೆಮಾಕ್ಸಿನ್, ಗಂಧಕ, ಸತುವಿನ ಸಲ್ಫೈಡ್, ಇವು ಕೀಟನಾಶಕಗಳಾಗಿವೆ.

94. ಜೀವಿಗಳು ವಾಸಿಸಲು ಬೇಕಾದ ಉಷ್ಣ – 10' ಸಿ – 40'ಸಿ

95. ಸಣ್ಣಕರುಳು ಮತ್ತು ದೊಡ್ಡ ಕರಳುಗಳನ್ನು ಅಪೆಂಡಿಕ್ಟಿಸ್ ಸೇರಿಸುತ್ತದೆ.

96. ಎಲೆಗಳ ವಯಸ್ಸನ್ನು ವೈಜ್ಞಾನಿಕವಾಗಿ ಪರಿಗಣಿಸಿ 4 ಯುಗಗಳನ್ನಾಗಿ ವಿಭಾಗಿಸಿದ್ದಾರೆ.

ಪ್ರೋಟೆರೋಜೋಯಿಕ್ --> ಅಕಶೇರುಕಗಳು

ಪೇಲಿಯೋಜೋಯಿಕ್ --> ಮೀನು

ಮೀಸೋಜೋಯಿಕ್ ---> ಸರಿಸೃಪಗಳು

ಸಿನೋಜೋಯಿಕ್ ---> ಸಸ್ತನಿಗಳ ಕಾಲ

97. ಸರಿಸೃಪಗಳಿಂದ ಸಸ್ತನಿಗಳು ವಿಕಾಸಗೊಂಡವು

98. ಸೀಲಾಕಾಂತ್ ಎಂಬ ನೀಲಿ ಮೀನು 400 ಮಿಲಿಯನ್ ವರ್ಷಗಳಿಂದ ಬದುಕುಳಿದಿದೆ.

## 9ನೇ ತರಗತಿ ಭೌತ ಶಾಸ್ತ್ರ

99. ಕಾಂತ ಮತ್ತು ಕಾಂತೀಯ ವಸ್ತುಗಳು ಪರಸ್ಪರ ಆಕರ್ಷಿಸುತ್ತವೆ.

100. ಒಂದೇ ಕಾಂತದ ಇರಡು ಧೃವಗಳ ಆಕರ್ಷಣ ಸಾಮರ್ಥ್ಯ ಒಂದೇ ಆಗಿರುತ್ತದೆ.

101. ವಿದ್ಯುತ್ ಪ್ರವಾಹದಲ್ಲಿ ಉಷ್ಣ, ಬೆಳಕು, ಕಾಂತ ಇವು ಒಂದನ್ನೊಂದು ಬೇರ್ಪಡಿಸಲಾಗುವುದಿಲ್ಲ ಎಂಬುದನ್ನು ಸಾಬೀತುಪಡಿಸಿದ ವಿಜ್ಞಾನಿ – ಹಾನ್ಸ್ ಕ್ರಿಶ್ಚಿಯನ್ ಆರ್ಸ್ಟೆಡ್

102. ವಿದ್ಯುತ್ ಪ್ರವಾಹದ ವಾಹಕದಲ್ಲಿ ದಿಕ್ಸುಚಿಯ ದಿಕ್‌ಪಲ್ಲಟವಾಗುವುದು.

103. ವಿದ್ಯುತ್ ಪ್ರವಾಹವು ಕ್ಷಿತಿಜಕ್ಕೆ ಲಂಬವಾಗಿದ್ದಾಗ ದಿಕ್ಸುಚಿಯ ಮುಳ್ಳು ಅಪ್ರದಕ್ಷಿಣೆಯಲ್ಲಿ ಅನಿಯಾಗುತ್ತದೆ. ಕೆಳಮುಖವಾಗಿದ್ದಾಗ ದಿಕ್ಸುಚಿಯ ಮುಳ್ಳು ಪ್ರದಕ್ಷಿಣೆಯಾಕಾರದಲ್ಲಿ ಅಣಿಯಾಗುತ್ತವೆ.

104. ಮ್ಯಾಕ್ಸ್‌ವೆಲೆನ್' ಬಲಗೈ ಹಿಡಗಟ್ಟು ನಿಯಮದ ಪ್ರಕಾರ ಹೆಬ್ಬೆರಳು ವಿದ್ಯುತ್ ಪ್ರವಾಹದ ದಿಕ್ಕನ್ನು ಸೂಚಿಸಿದರೆ ಇತರೆ ಬೆರಳುಗಳು

105. ವೃತ್ತಾಲಾರ ವಾಹಕ ಸುರುಳಿಯಲ್ಲಿ ವಿದ್ಯುತ್ ಪ್ರವಾಹ ಉಂಟಾದಾಗ ಸುರುಳಿಯ ಕೇಂದ್ರದಲ್ಲಿ ಏಕರೂಪ ಕಾಂತಕ್ಷೇತ್ರ ಏರ್ಪಡುತ್ತದೆ. ಸುರುಳಿಯ ಸುತ್ತುಗಳ ಸಂಖ್ಯೆ ಹೆಚ್ಚಿದಂತೆ ಕಾಂತಕ್ಷೇತ್ರದ ಪ್ರಭಲತೆ ಹೆಚ್ಚುತ್ತದೆ.

106. ಸುರುಳಿಯ ವ್ಯಾಸ ಕಡಿಮೆಯಾದಂತೆ ಕಾಂತಕ್ಷೇತ್ರದ ಪ್ರಬಲತೆ ಹೆಚ್ಚುತ್ತದೆ.

107. ವಿದ್ಯುತ್ ಆವಿಷ್ಟ ಕಣಗಳೂ ತಮ್ಮ ಚಲನೆಯಿಂದ ಪಡೆದುಕೊಳ್ಳುವ ಶಕ್ತಿಯೇ ವಿದ್ಯುತ್‌ಚ್ಚಕ್ತಿ

108. ಏಕಮಾನ ಧನ ವಿದ್ಯುತ್ ಆವೇಶಯುಕ್ತ ಕಣಗಳನ್ನು ಆನಂತ ಬಿಂದುವಿನಿಂದ ನಿಗದಿತ ಬಿಂದುವಿಗೆ ತರುವಲ್ಲಿ ನಡೆದ ಕೆಲಸವನ್ನು ನಿಗದಿತ ಬಿಂದುವಿನ ವಿದ್ಯುತ್ ವಿಭವ ಎನ್ನುವರು.

18

109. ವಿದ್ಯುತ್ ವಿಭವದ ಅಂತರಾಷ್ಟ್ರೀಯ ಏಕಮಾನ ಕೂಲಮ್ = 6.3 x10 ಎಲೆಕ್ಟ್ರಾನುಗಳ ಒಟ್ಟು ವಿದ್ಯುತ್ ಆವೇಶ

110. ವಿಭವಾಂತರದ ಅಂತರಾಷ್ಟ್ರೀಯ ಏಕಮಾನ = ವೋಲ್ಟ್

111. ವಿಭವಾಂತರವನ್ನು ಅಳೆಯುವ ಅಂತರಾಷ್ಟ್ರೀಯ ಸಾಧನ = ವೋಲ್ಟಾಮೀಟರ್

112. ವಿದ್ಯುತ್ ಪ್ರವಾಹವನ್ನು ಉಂಟುಮಾಡುವ ಕಣಗಳು – ಎಲೆಕ್ಟ್ರಾನುಗಳು

113. ಒಂದು ಸೆಕೆಂಡಿನಲ್ಲಿ ಒಂದು ವಾಹಕದ ಯಾವುದೇ ಬಿಂದುವಿನ ಮೂಲಕ ಪ್ರವಾಹಿಸುತ್ತಿರುವ ವಿದ್ಯುತ್ ಆವೇಶದ ಪರಿಮಾಣವನ್ನು ಆ ವಾಹಕದಲ್ಲಿರುವ ವಿದ್ಯುತ್ ಪ್ರವಾಹ ಎನ್ನುವರು.

114. ವಿದ್ಯುತ್ ಪ್ರವಾಹ – ಐ ಇದರ ಅಂತರಾಷ್ಟ್ರೀಯ ಏಕಮಾನ = ಆಂಪೈರ್

115. ಒಂದು ಸೆಕೆಂಡಿನಲ್ಲಿ ಪ್ರವಾಹಿಸಿದ ವಿದ್ಯುದಾವೇಶಗಳ ಪರಿಮಾಣವನ್ನು ಒಂದು ಆಂಪೈರ್ ಎನ್ನುವರು.

116. ವಿದ್ಯುತ್ ಚಾಲಕ ಬಲದ ಅಂತರಾಷ್ಟ್ರೀಯ ಏಕಮಾನ – ವೋಲ್ಟಾಮೀಟರ್

117. ವಿದ್ಯುದಾವಿಷ್ಟಗಳ ಚಲನೆಗೆ ವಾಹಕ ಒಡ್ಡಿದ ಅಡಚಣೆಯನ್ನು ವಿದ್ಯುತ್‌ರೋಧ ಎನ್ನುವರು.

118. ವಿದ್ಯುತ್ ರೋಧದ ಅಂತರಾಷ್ಟ್ರೀಯ ಏಕಮಾನ – ಓಮ್

119. 1 ಹೆಚ್‌ಪಿ = 746 ವ್ಯಾಟ್ ( ಒಂದು ಸೆಕೆಂಡಿನಲ್ಲಿ ಒಂದು ಜೂಲ್ ಶಕ್ತಿ ಬಳಕೆಯಾಗಿ ಕೆಲಸ ನಡೆದರೆ ಅದು ಒಂದು ವ್ಯಾಟ್)

120. ಒಂದು ಯೂನಿಟ್ = Kwh

121. ವಿದ್ಯುತ್ ಸಾಮರ್ಥ್ಯದ ವ್ಯವಹಾರಿಕ ಏಕಮಾನ = ಯೂನಿಟ್

122. ಫ್ಯೂಜ್ – ಇದು ವಿದ್ಯುನ್ಮಂಡಲದ ಟ್ರಾಫಿಕ್ ಪೋಲೀಸ್ ಎಂದು ಕರೆಯುವರು.

123. ಸ್ಥಾನಪಲ್ಲಟ – ಕಾಯದ ಆರಂಭಿಕ ಸ್ಥಾನದಿಂದ ಅಂತಿಮ ಸ್ಥಾನಕ್ಕೆ ಇರುವ ಕನಿಷ್ಠ ದೂರ.

124. ಚಲಿಸಿದ ದೂರ, ಜವ -> ಅದಿಶ, ವೇಗ, ವೇಗೋತ್ಕರ್ಷ, ಸ್ಥಾನಪಲ್ಲಟ -> ಸದಿಶ

125. ಚಲನೆಗೆ ಕಾರಣವಾಗುವ ಬಲಗಳು – ಯಾಂತ್ರಿಕ ಬಲಗಳಾಗಿವೆ.

126. ಭೂಮಿಯ ವೇಗ – 9.8 $ms^{2}$ (ಗುರುತ್ವ ವೇಗೋತ್ಕರ್ಷ ಭೂಮಧ್ಯ ರೇಖೆಯಲ್ಲಿ ಗರಿಷ್ಠವಿರುತ್ತದೆ)

127. ಚಲನೆಯ ಸಮೀಕರಣಗಳು:

➔ $V = U + at$

➔ $S = ut + \frac{1}{2} at^2$

➔ $V^2 = U^2 + 2as$

➔ $V^2 - U^2 = 2gh$

128. ಚಲನೆ ಮತ್ತು ಬಲದ ನಡುವಿನ ಸಂಭಂಧವನ್ನು ತೋರಿಸಿಕೊಟ್ಟ ವಿಜ್ಞಾನಿ – ಗೆಲಿಲಿಯೋ

129. ಯಾವುದೇ ಕಾಯದ ಮೇಲೆ ನಡೆಸುತ್ತಿರುವ ಒಟ್ಟಾರೆ ಫಲಿತ ಬಲದ ಪರಿಮಾಣ ಸೊನ್ನೆ ಆಗದೇ ಇದ್ದರೆ ಆ ಕಾಯ ವೇಗೋತ್ಕರ್ಷಗೊಳಸುತ್ತದೆ.

130. ಚಲನ ಶಕ್ತಿ $1/2\ mv^2$

131. $w = f \times d$

132. ಪ್ರಚ್ಛನ್ನ ಶಕ್ತಿಯನ್ನು ಕಂಡುಹಿಡಿಯುವ ಸೂತ್ರ -> $w = mgh$

133. ಅಂತರಾಷ್ಟ್ರೀಯ ಪದ್ಧತಿಯಲ್ಲಿ ಶಕ್ತಿಯ ಏಕಮಾನ – ಜೂಲ್ ಅಥವಾ ನ್ಯೂಟನ್ ಮೀಟರ್

134. ವಸ್ತುಗಳು ಉಷ್ಣದಿಂದ ಏಕರೀತಿಯಲ್ಲಿ ವ್ಯಾಕೋಚಿಸುವುದಿಲ್ಲ.

135. ಒಂದು ಮೀಟರ್ ಉದ್ದದ ಸಲಾಕೆಯನ್ನು 1 °ಸಿ ನಷ್ಟು ಉಷ್ಣ ಕೊಟ್ಟಾಗ ಅದರ ಉದ್ದದಲ್ಲಿ ಹೆಚ್ಚಳವಾಗುವುದಕ್ಕೆ ಆ ಘನದ ರೇಖೆಯ ವ್ಯಾಕೋಚನ ಸಹಾಂಕವಾಗುತ್ತದೆ.

136. ರೇಖೆಯ ವ್ಯಾಕೋಚನ ಸಹಾಂಕದ ಅಂತರಾಷ್ಟ್ರೀಯ ಏಕಮಾನ $K^{-1}$ (ಪರ್ ಡಿಗ್ರಿ ಕೆಲ್ವಿನ್)

137. ತಾಪದ ಅಂತರಾಷ್ಟ್ರೀಯ ಏಕಮಾನ – ಕೆಲ್ವಿನ್ (K)

138. ವಿವಿಧ ವಸ್ತುಗಳ ತಾಪವನ್ನು ಒಂದೇ ಮಟ್ಟಕ್ಕೆ ಏರಿಸಲು ವಿವಿಧ ಮಟ್ಟಗಳಲ್ಲಿ ಉಷ್ಣ ಕೊಡುವುದಕ್ಕೆ 'ವಿಶಿಷ್ಟೋಷ್ಣ' ಎಂದು ಕರೆಯುವರು.

139. ಒಂದು ಕೆ.ಜಿ. ರಾಶಿಯುಳ್ಳ ವಸ್ತುವನ್ನು 1'ಸಿ ನಷ್ಟು ಏರಿಸಲು ಕೊಡಲೇಬೇಕಾದ ಉಷ್ಣವನ್ನು ಆ ವಸ್ತುವಿನ ವಿಶಿಷ್ಟೋಷ್ಣ ಎನ್ನುವರು.

140. ವಿಶಿಷ್ಟೋಷ್ಣದ ಅಂತರಾಷ್ಟ್ರೀಯ ಏಕಮಾನ (ಜೂಲ್/ಕಿಲೋಗ್ರಾಂ/ ೦ ಡಿಗ್ರಿ ಸೆಲ್ಸಿಯಸ್)

141. ವಸ್ತುವಿನ ಉಷ್ಣ ಅದರ ಸ್ವಭಾವನ್ನು ಅವಲಂಬಿಸಿದೆ.

142. ಉಷ್ಣ ಸಾಮರ್ಥ್ಯವನ್ನು ಕಂಡು ಹಿಡಿಯುವ ಸೂತ್ರ - H = ms ( m= ರಾಶಿ s= ವಿಶಿಷ್ಟೋಷ್ಣ)

143. ಕುದಿಬಿಂದು, ದ್ರವನಬಿಂದು, ಆವಿಕರಣ ಬಿಂದು ಇವುಗಳಲ್ಲಿ ವ್ಯಾತ್ಯಾಸವಿದೆ.

144. ವಸ್ತುವಿನ ತಾಪವನ್ನು ಹೆಚ್ಚಿಸದೆ ಅದನ್ನು ದ್ರವ ಸ್ಥಿತಿಗೆ ಬದಲಾಯಿಸಲು ಬೇಕಾದ ಉಷ್ಣವನ್ನು 'ದ್ರವನ ಗೊಪ್ತೋಷ್ಣ' ಎನ್ನುವರು.

145. ಕೆಲವು ವಸ್ತುಗಳ ಅವಿಕರಣ ಗುಪ್ತೋಷ್ಣ ($KJKg^{-1}$) ನೀರು- 2260, ಪಾದರಸ- 300, ಅಮೋನಿಯ-1400, ಆಲ್ಕೋಹಾಲ್ – 900

146. ತಾಪ ಹೆಚ್ಚಿಸದೆ ಗಾತ್ರದಲ್ಲಿ ಏರಿಕೆಯಾಗುವುದೇ ಗುಪ್ತೋಷ್ಣ

147. ಸಮೀಪ ದೃಷ್ಟಿ ದೋಷ' ನಿವಾರಣೆಗೆ ನಿಮ್ನ ಮಸೂರವನ್ನು ಉಪಯೋಗಿಸುತ್ತಾರೆ.

148. ದೂರ ದೃಷ್ಟಿ ದೋಷ' ನಿವಾರಣೆಗೆ ಪೀನ ಮಸೂರವನ್ನು ಉಪಯೋಗಿಸುತ್ತಾರೆ.

149. ಸೂಕ್ಷ್ಮದರ್ಶಕಗಳಲ್ಲಿ "ಪೀನಮಸೂರವನ್ನು" ಉಪಯೋಗಿಸುತ್ತಾರೆ.

150. ಭೂತ ಕನ್ನಡಿಯಲ್ಲಿ "ಪೀನಮಸೂರವನ್ನು" ಉಪಯೋಗಿಸುತ್ತಾರೆ.

